ಸಭೆ, ಸಮಾರಂಭ, ಜಾತ್ರೋತ್ಸವ, ನೇಮೋತ್ಸವ, ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996


# ಅಮರ ಸುಳ್ಯ ಸುದ್ದಿ

AMARA SULLIA SUDDHI

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ

Regd.No.PTR/126/2022-24
Licenced to Post under WPP
No. SK/WPP/PTR/156/2022-24






Mob : 9449387044, Off. : 7338248044
Facebook : Amarasullia Suddi

ಪ್ರಧಾನ ಸಂಪಾದಕರು : ಮುರಳೀಧರ ಅಡ್ಡನಪಾರೆ Email: amarasuddi@gmail.com Website : www.amarasuddi.com

RNI No. KAR KAN / 2012/ 49234 | ಸಂಪುಟ –14 | ಸಂಚಿಕೆ – 05 | 2024 ಎ.12ರಿಂದ ಎ.18ರವರೆಗೆ | Posted at SULLIA M.D.G. ON 12.04.2024 | ಪುಟ–6 | ಬೆಲೆ: ರೂ. 4.00


## ರಾಜ್ಯಕ್ಕೆ 7 ಮತ್ತು 10ನೇ ರ್‍ಯಾಂಕ್ – ತಾಲೂಕಿನಲ್ಲಿ ಪ್ರಥಮ ಸ್ಥಾನ – ದಾಖಲೆ ನಿರ್ಮಿಸಿದ ಕೆವಿಜಿ ಅಮರಜ್ಯೋತಿ ಹಾಗೂ ಶಾರದಾ ಕಾಲೇಜಿನ ವಿದ್ಯಾರ್ಥಿಗಳು

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು ಸುಳ್ಯದ ಹಲವರು ರಾಜ್ಯಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಬೃಂದಾ ಸುರೇಶ್ ರಾಜ್ಯದಲ್ಲಿ 10 ರ್‍ಯಾಂಕ್ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಸಂಜನಾ ರಾವ್ 591 ಅಂಕ ಪಡೆದು ರಾಜ್ಯದಲ್ಲಿ 7 ನೇ ರ್‍ಯಾಂಕ್ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಅನುಷ್ಯ 587 ಅಂಕ ಪಡೆದು ರಾಜ್ಯದಲ್ಲಿ 10 ನೇ ರ್‍ಯಾಂಕ್ ಗಳಿಸಿ ಸಾಧನೆ ಮಾಡಿದ್ದಾರೆ. ಕೆವಿಜಿ ಅಮರಜ್ಯೋತಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ







ವಿಭಾಗದ ವಿದ್ಯಾರ್ಥಿ ಕೆವಿಜಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲರಾದ ಡಾ.ಸುರೇಶ್ ಹಾಗೂ ದಾಕ್ಷಾಯಿಣಿ ದಂಪತಿಗಳ ಪುತ್ರಿ ಬೃಂದಾ ಸುರೇಶ್. ಮೂಲತಃ ಇವರು ಮೈಸೂರು ಕೊಳ್ಳೆಗಾಲದ ಸತ್ಯಗಾಲ ಗ್ರಾಮದವರು. ಹಾಗೂ ಪ್ರಥಮ್ ಶೇಖರ್ 588 ಅಂಕ ಪಡೆದು ರಾಜ್ಯಕ್ಕೆ 11ನೇ ರ್‍ಯಾಂಕ್ ಪಡೆದು ವಿಜ್ಞಾನ ವಿಭಾಗದಲ್ಲಿ ದಾಖಲೆ ನಿರ್ಮಿಸಿರುತ್ತಾರೆ.

ಇದೇ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಸುಳ್ಯ ಚೆನ್ನಕೇಶವ ದೇವಸ್ಥಾನದ ಸಮೀಪದ ನಿವಾಸಿ ಹೇಮಪ್ರಕಾಶ್ – ವಂದನಾ ದಂಪತಿಗಳ ಪುತ್ರಿ ಸಂಜನಾ ರಾವ್ ಎಚ್ 591 ಅಂಕ ಪಡೆದು ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದು ವಾಣಿಜ್ಯ ವಿಭಾಗದಲ್ಲಿ ದಾಖಲೆ ನಿರ್ಮಿಸಿರುತ್ತಾರೆ. ಶಾರದಾ ಮಹಿಳಾ ಪದಬಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಜಾಲ್ಸೂರು ಗ್ರಾಮದ ಕುಕ್ಕುಂದೂರು ಅರುಲ್ ರಾಜ್ ಮತ್ತು ಭಾನುಮತಿ ದಂಪತಿಗಳ ಪುತ್ರಿ ಅನುಷ್ಯ 587 ಅಂಕ ಪಡೆದು ರಾಜ್ಯದಲ್ಲಿ 10ನೇ ರ್‍ಯಾಂಕ್ ಪಡೆದಿದ್ದಾರೆ.

## ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕ ಆದಾಯ 146.01 ಕೋಟಿ ರೂ – ಆದಾಯದಲ್ಲಿ ರಾಜ್ಯಕ್ಕೆ ನಂಬರ್ ವನ್

ಸುಬ್ರಹ್ಮಣ್ಯ: ಪ್ರಸಿದ್ಧ ನಾಗಾರಾಧನೆಯ ಪುಣ್ಯ ಕ್ಷೇತ್ರ ಸುಬ್ರಹ್ಮಣ್ಯದ ಪವಿತ್ರ ಕುಕ್ಕೆ ಸುಬ್ರಹ್ಮಣ್ಯ ದೇವಾಲಯವು 2023–24ನೇ ಸಾಲಿನ ಆರ್ಥಿಕ ವರ್ಷದಲ್ಲಿ 146.01 ಕೋಟಿ ರೂ ಆದಾಯ ಗಳಿಸಿದೆ. 2023 ಎಪ್ರೀಲ್‌ನಿಂದ 2024 ಮಾರ್ಚ್ 31ರ ತನಕದ ಆರ್ಥಿಕ ವರ್ಷದಲ್ಲಿ ದೇವಳಕ್ಕೆ ಈ ಆದಾಯ ಲಭಿಸಿದೆ. ಈ ಮೂಲಕ ಸತತ 13ನೇ ವರ್ಷ ಆದಾಯದಲ್ಲಿ ರಾಜ್ಯದ ನಂಬರ್ ದೇವಳವಾಗಿ ಮುಂದುವರೆದಿದೆ. ಕಳೆದ ವರ್ಷ ಶ್ರೀ ದೇವಳವು 123 ಕೋಟಿ ಆದಾಯ



ಗಳಿಸಿತ್ತು.

ಹಲವಾರು ವರ್ಷಗಳಿಂದ ನಿರಂತರವಾಗಿ ಆದಾಯ ಗಳಿಕೆಯಲ್ಲಿ ರಾಜ್ಯದ ನಂಬರ್ ವನ್ ದೇವಸ್ಥಾನವಾಗಿ ಹೊರ ಹೊಮ್ಮಿರುವ ಕುಕ್ಕೆಯು ಈ ಬಾರಿ 146.01 ಕೋಟಿ ರೂ ಆದಾಯ ಗಳಿಸುವ ಮೂಲಕ ಸತತವಾಗಿ ನಂಬರ್ ವನ್ ಸ್ಥಾನವನ್ನು ಗಟ್ಟಿಗೊಳಿಸಿದೆ.ಉಳಿದಂತೆ ರಾಜ್ಯ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಕೊಲ್ಲೂರು ಮುಕಾಂಬಿಕಾ ದೇವಳ 68.23 ಕೋಟಿ ರೂ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ 30.73 ಕೋಟಿ ರೂ, ಸವದತ್ತಿ ರೇಣುಕಾ ಯಲ್ಲಮ್ಮ 25.80 ಕೋ ರೂ, ಮಂದಾರ್ತಿ ದುರ್ಗಾ ಪರಮೇಶ್ವರಿ ದೇವಸ್ಥಾನ 15.27 ಕೋ.ರೂ, ಕೊಪ್ಪಳ ಜಿಲ್ಲೆ ಹುಲಿಗೆಮ್ಮ ದೇವಿ ದೇವಸ್ಥಾನ 16.29 ಕೋ.ರೂ, ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ 13.65 ಕೋ ರೂ, ಬೆಂಗಳೂರಿನ ಬನಶಂಕರಿ ದೇವಸ್ಥಾನ 11.37 ಕೋ ರೂ ಆದಾಯ ಗಳಿಸಿದೆ.

ದೇವಸ್ಥಾನಕ್ಕೆ ಮುಖ್ಯವಾಗಿ ಗುತ್ತಿಗೆಗಳಿಂದ, ತೋಟದ ಉತ್ಪನ್ನದಿಂದ, ಕಟ್ಟಡ ಬಾಡಿಗೆಯಿಂದ, ಕಾಣಿಕೆಯಿಂದ, ಕಾಣಿಕೆ ಹುಂಡಿಯಿಂದ, ಹರಿಕೆ ಸೇವೆಗಳಿಂದ, ಅನುದಾನದಿಂದ, ಶಾಶ್ವತ ಸೇವೆಗಳಿಂದ, ಸೇವೆಗಳಿಂದ ಆದಾಯ ಬರುತ್ತಿದೆ.ಶ್ರೀ ದೇವಳದಲ್ಲಿ ಆದಾಯದ ಒಟ್ಟು ಲೆಕ್ಕಾಚಾರ ಈಗಾಗಲೇ ಮುಗಿದಿದೆ.

ಉಳಿದಂತೆ ಸೇವೆ ಕಾಣಿಕೆ ಮೊದಲಾದುವುಗಳಿಂದ ಬಂದ ಆದಾಯದ ವಿಭಜನೆ ಇದೀಗ ನಡೆಯುತ್ತಿದ್ದು ಈ ಲೆಕ್ಕಾಚಾರವು ಇನ್ನೆರಡು ದಿನಗಳಲ್ಲಿ ದೊರಕಲಿದೆ.

2006–07ರಲ್ಲಿ ದೇವಳದ ಆದಾಯವು 19.76 ಕೋಟಿ ರೂ. ಆಯಿತು. 2007–08ರಲ್ಲಿ 24.44 ಕೋಟಿ ರೂ.ಗಳಿಗೆ ಆದಾಯವು ನೆಗೆದು ರಾಜ್ಯದ ಶ್ರೀಮಂತ ದೇವಾಲಯವಾಗಿ ಪರಿಗಣಿತವಾಯಿತು.

ನಂತರದ ವರ್ಷಗಳಲ್ಲಿ ರಾಜ್ಯದ ನಂ.1 ದೇವಸ್ಥಾನವೆಂದು ಪರಿಗಣಿಸಲ್ಪಟ್ಟಿತು. 2008–09ರಲ್ಲಿ 31 ಕೋಟಿ ಆದಾಯ, 2009–10ರಲ್ಲಿ 38.51 ಕೋಟಿ ರೂ. ಆದಾಯ, 2011–12ರಲ್ಲಿ 56.24 ಕೋಟಿ, 2012–13ರಲ್ಲಿ 66.76 ಕೋಟಿ ರೂ., 2013–14ರಲ್ಲಿ 68 ಕೋಟಿ ರೂ, 2014–15ರಲ್ಲಿ 77.60 ಕೋಟಿ ರೂ, 2015–16ರಲ್ಲಿ 88.83 ಕೋ ರೂ, 2016–17ರಲ್ಲಿ 89.65ರೂ,2017–18ರಲ್ಲಿ 95.92 ಕೋ ರೂ, 2018–19ರಲ್ಲಿ 92.09 ಕೋ ರೂ, 2019–20ರಲ್ಲಿ 98.92 ಆದಾಯ ಗಳಿಸಿತ್ತು. 2020–21 ರಲ್ಲಿ 68.94 ಕೋ.ರೂ, 2021–22 ರಲ್ಲಿ 72.73 ರೂ. ಆದಾಯ ಗಳಿಸಿದರೆ, 2022–23ನೇ ಸಾಲಿನಲ್ಲಿ 123 ಕೋಟಿ ರೂ ಆದಾಯ ಗಳಿಸಿತ್ತು.

## ಬೆಳ್ಳಾರೆಯಲ್ಲಿ ಸಾರ್ವಜನಿಕ ರುದ್ರಭೂಮಿ ನಿರ್ಮಿಸಲು ಜನರ ಆಗ್ರಹ – ಸರಕಾರದಿಂದ ಮಂಜೂರಾದ 30 ಲಕ್ಷ ಅನುದಾನಕ್ಕೆ ಅಡ್ಡಗಾಲು – ಲಕ್ಷಾಂತರ ಹಣ ದುರುಪಯೋಗ ಆಗಿದೆಯೇ?

ಸುಳ್ಯ ತಾಲೂಕಿನಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ಪೇಟೆಗಳಲ್ಲಿ ಬೆಳ್ಳಾರೆಯೂ ಒಂದು. ಇಲ್ಲಿ ವ್ಯವಸ್ಥಿತ ರುದ್ರಭೂಮಿ ಮರೀಚಿಕೆಯಾಗಿಯೇ ಉಳಿದಿದ್ದು, ಆಡಳಿತ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಗ್ರಾಮಕ್ಕೆ ಸಾರ್ವಜನಿಕ ಸ್ಮಶಾನ ನಿರ್ಮಾಣಕ್ಕೆ ಕಂದಾಯ ಇಲಾಖೆಯು ಸುಮಾರು 84 ಸೆಂಟ್ಸ್ ಜಾಗ ಮಂಜೂರುಗೊಳಿಸಿದ್ದು ಇದರ ಅಭಿವೃದ್ಧಿಗಾಗಿ ಈಗಾಗಲೇ ಲಕ್ಷಾಂತರ ಹಣ ವ್ಯಯಿಸಲಾಗಿದೆ. ಲಕ್ಷಾಂತರ ಖರ್ಚು ಮಾಡಿ ಅವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ಮಾಡಲಾಗಿದ್ದು, ಇದುವರೆಗೆ ಓರ್ವ ವ್ಯಕ್ತಿಯ ಶವ ಸಂಸ್ಕಾರವನ್ನು ಮಾಡಲು ಅಸಾಧ್ಯವಾಗಿದೆ ಎಂದು ಗ್ರಾಮಸ್ಥರು ದೂರುತ್ತಿದ್ದಾರೆ. ಇದೀಗ ಉಪಯೋಗಕ್ಕೆ ಸಾಧ್ಯವಾಗದೇ ಪಾಳುಬಿದ್ದಿದೆ. ಛಾವಣಿ ಕಿತ್ತು ಹೋಗಿದೆ. ಇತ್ತೀಚೆಗೆ ಓರ್ವ ವ್ಯಕ್ತಿ ಮೃತಪಟ್ಟಾಗ ಬೆಳ್ಳಾರೆಯ ಸ್ಮಶಾನಕ್ಕೆ ತಂದಾಗ ಅಲ್ಲಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಸುಳ್ಯಕ್ಕೆ ತಂದು ಶವ ಸಂಸ್ಕಾರ ಮಾಡಿದ ಪ್ರಸಂಗವು ನಡೆದಿದೆ.



ಗ್ರಾಮ ಪಂಚಾಯತ್ ಅಧ್ಯಕ್ಷರಾದ ನಮಿತಾ ರೈ ರವರನ್ನು ದೂರವಾಣಿ ಮೂಲಕ ವಿಚಾರಿಸಿದಾಗ ಇದು ಕಳೆದ ಗ್ರಾಮ ಸಭೆಯಲ್ಲಿ ಪ್ರಸ್ತಾಪವಾದಾಗ ನನಗೆ ತಿಳಿದದ್ದು, ಅಲ್ಲದೇ ಈ ಹಿಂದಿನ ಅಧ್ಯಕ್ಷರು ಅವಧಿಯಲ್ಲಿ ಅನುದಾನಗಳು ಬಂದಿವೆ ಅದರ ಕೆಲಸಗಳು ಆಗಿವೆ ಎಂದು ಹೇಳಿದರು . ಸಾರ್ವಜನಿಕ ಸ್ಮಶಾನ ನಿರ್ಮಾಣಕ್ಕೆ ಒಟ್ಟು 80 ಲಕ್ಷ ರೂಪಾಯಿಗಳು ತಗುಲಲಿದ್ದು ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯಿಂದ 30 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಗೊಂಡಿದ್ದು ಅದಕ್ಕೆ ಗ್ರಾಮದವರೇ ಆದ ಆನಂದ ಎಂಬವರು ಆಕ್ಷೇಪ ಮಾಡಿದ್ದಾರೆ. ಅನುದಾನ ತಡೆಹಿಡಿಯಲು ತಾನೇ ಅರ್ಜಿ ಸಲ್ಲಿಸಿದ್ದು ಎಂದು ಅವರು ಗ್ರಾಮಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಹೀಗೆ ಸಾರ್ವಜನಿಕ ಕೆಲಸಗಳಿಗೆ ಅಡ್ಡಿಪಡಿಸಿದಲ್ಲಿ ಅಭಿವೃದ್ಧಿ ಮಾಡುವುದು ಹೇಗೆ ಸಾಧ್ಯ ಎಂದು ಹೇಳಿದರು. ಅಲ್ಲದೇ ಇದುವರೆಗಿನ ಅನುದಾನ ಬಂದ ಮಾಹಿತಿಗಳು ನನಗೆ ತಿಳಿದಿರುವ ಪ್ರಕಾರ ಮಾಜಿ ಸಚಿವರು ಶಾಸಕರಾದ ಎಸ್ ಅಂಗಾರರವರ ನೇತೃತ್ವದಲ್ಲಿ ತಡೆಗೋಡೆ ನಿರ್ಮಾಣಕ್ಕೆ 5 ಲಕ್ಷ , ಸಂಸದರ ನಿಧಿಯಿಂದ 2.5 ಲಕ್ಷ , ಸಚಿವರ ನಿಧಿಯಿಂದ 5 ಲಕ್ಷ , ಅಲ್ಲದೆ ಶೌಚಾಲಯ ನಿರ್ಮಾಣಕ್ಕೆ ತಾಲೂಕು ಪಂಚಾಯತ್ ಅನುದಾನ ಸೇರಿದಂತೆ ಸ್ವಂತ ನಿಧಿಯಿಂದ 2 ಲಕ್ಷ ರೂಪಾಯಿಗಳಲ್ಲಿ ರಸ್ತೆ ನಿರ್ಮಾಣ ಅಲ್ಲದೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ ಎಂದು ಹೇಳಿದರು. ಮಂಜೂರುಗೊಂಡ ಅನುದಾನ ಬಾರದೇ ಇದ್ದಲ್ಲಿ ಸ್ಮಶಾನ ನಿರ್ಮಾಣಕ್ಕೆ ಬಿಕ್ಷೆ ಬೇಡುವುದು ಅನಿವಾರ್ಯ , ರಸ್ತೆಯಲ್ಲಿ ಬಿಕ್ಷೆ ಬೇಡಿ ಸ್ಮಶಾನ ನಿರ್ಮಾಣಕ್ಕೆ ಗ್ರಾಮಸ್ಥರು ಜೊತೆಗೂಡಿ . ನಾವು ನಮ್ಮ ಗ್ರಾಮಕ್ಕೆ ಉತ್ತಮವಾದ ಒಂದು ಸಾರ್ವಜನಿಕ ಸ್ಮಶಾನಕ್ಕಾಗಿ ಈ ಹಿಂದಿನಿಂದಲೇ ಪ್ರಯತ್ನಿಸುತ್ತಿದ್ದು, ಆದರೂ ಆಗಿಲ್ಲ ಎಂಬುದು ನೋವಿನ ವಿಚಾರವಾಗಿದೆ ಎಂದು ಹೇಳಿದರು. ಅಲ್ಲದೇ ನಮ್ಮ ಗ್ರಾಮದಲ್ಲಿ ಸಾರ್ವಜನಿಕ ಸ್ಮಶಾನಕ್ಕೆ ಮೊದಲ ಆದ್ಯತೆಯಾಗಿರಲಿದೆ ಎಂದು ಗ್ರಾ.ಪಂ. ಅಧ್ಯಕ್ಷೆ ನಮಿತಾ ರೈ ಹೇಳಿದರು.

ಈ ವಿಚಾರದ ಬಗ್ಗೆ ಆನಂದ ಬೆಳ್ಳಾರೆ ಮಾತನಾಡಿ "ಇದೀಗ ಆಗುತ್ತಿರುವ ಸ್ಮಶಾನ ಎಸ್ಸಿ ಕಾಲೋನಿ ಪಕ್ಕದಲ್ಲಿ ಇದೆ. ಇಲ್ಲಿರುವ ಸುಮಾರು 10ಕ್ಕೂ ಹೆಚ್ಚು ಕುಟುಂಬಗಳು ಯಾವುದೇ ಸೌಕರ್ಯ ಮತ್ತು ಅಡಿಸ್ಥಳವಿಲ್ಲದೆ ತೊಂದರೆಗೀಡಾಗಿದ್ದಾರೆ. ಅದನ್ನು ಮೊದಲು ಗ್ರಾಮ ಪಂಚಾಯತ್ ಸರಿಪಡಿಸಲಿ ಎಂದು ಹೇಳಿದರು. ಅಲ್ಲದೇ ಸುಮಾರು 30 ಲಕ್ಷ ಅನುದಾನವನ್ನು ಎಸ್ಸಿ ಎಸ್ಟಿ ಅನುದಾನದಿಂದ ಕೋಟ ಶ್ರೀನಿವಾಸ್ ಪೂಜಾರಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದಾಗ ನೀಡಿದ್ದರು. ಆದರೆ ಇದು ಎಸ್ಸಿ ಎಸ್ಟಿ ಸಮಾಜಕ್ಕೆ ಮಾತ್ರವಲ್ಲ ಇಲ್ಲಿ ಸಾರ್ವಜನಿಕವಾಗಿ ನೀಡುತ್ತಾರೆ. ಈ ಹಿನ್ನಲೆಯಲ್ಲಿ ಬೆಂಗಳೂರಿಗೆ ತೆರಳಿ ಆಯುಕ್ತರು ಮತ್ತು ಜಿಲ್ಲೆಯ ಅಧಿಕಾರಿಗಳಿಗೆ ಪತ್ರ ನೀಡಿದ ಬಳಿಕ ಈ ಅನುದಾನವನ್ನು ತಡೆಹಿಡಿಯಲಾಗಿದೆ ಎಂದು ಅವರು ಹೇಳಿದರು.

ಒಟ್ಟಿನಲ್ಲಿ ಎಲ್ಲರ ಹೇಳಿಕೆಗಳು ಜನರ ಆಕ್ರೋಶಗಳನ್ನು ಗಮನಿಸಿದಾಗ ಅಧಿಕಾರಿಗಳು ಇನ್ನಾದರು ಎಚ್ಚೆತ್ತು ಬೆಳೆಯುತ್ತಿರುವ ನಗರವಾದ ಬೆಳ್ಳಾರೆಗೆ ಸುಸಜ್ಜಿತ ಸ್ಮಶಾನವನ್ನು ಮಾಡಬೇಕಿದೆ. ಜಾತಿ, ಧರ್ಮ, ಪಕ್ಷ, ಮತ ಭೇದಗಳನ್ನು ಮಾಡುತ್ತಾ ವ್ಯಕ್ತಿಗಳ ಪ್ರತಿಷ್ಠೆಗೆ ಒಳಗಾಗದೇ ಅಭಿವೃದ್ಧಿಪಡಿಸಿ ಬೆಳ್ಳಾರೆ ಗ್ರಾಮದಲ್ಲಿ ಮೃತಪಟ್ಟ ಜನರ ಸಂಸ್ಕಾರಕ್ಕೆ ಸ್ಮಶಾನ ಸಿದ್ದವಾಗಲಿ ಎನ್ನುವುದೇ ನಮ್ಮ ಆಶಯವಾಗಿದೆ.

## ಮರ್ಕಂಜ: ಗಣಿಗಾರಿಕೆ ವಿರುದ್ಧ ಮತ್ತೆ ಸಿಡಿದೆದ್ದ ಗ್ರಾಮಸ್ಥರು, ಚುನಾವಣಾ ಬಹಿಷ್ಕಾರಕ್ಕೆ ನಿರ್ಧಾರ

ಅಳವುಪಾರೆಂಬಲ್ಲಿ ಕಾನೂನುಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆಯನ್ನು ತಡೆಯದಿದ್ದಲ್ಲಿ ಚುನಾವಣಾ ಬಹಿಷ್ಕಾರ ಮಾಡುವುದಾಗಿ ಗ್ರಾಮಸ್ಥರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ. ಇದೀಗ ತಾಲೂಕು ಕಛೇರಿ ಮುಂಭಾಗ ಗ್ರಾಮಸ್ಥರು ಸೇರಿದ್ದಾರೆ.

ಸುಳ್ಯ ತಾಲೂಕು ಮರ್ಕಂಜ ಗ್ರಾಮದ ಅಳವುಪಾರೆ ಎಂಬಲ್ಲಿ ಸ. ನಂಬ್ರ 173/1ಬಿ2ಎಪಿAರ ಸರಕಾರಿ ಸ್ಥಳದಲ್ಲಿ ತಮ್ಮಪ್ಪ ಗೌಡ ಪೂಂಬಾಡಿಯವರು ಕೈಯಿಂದ ಒಡೆದು ಕಲ್ಲು ಒಡೆಯುವ ಗಣಿಗಾರಿಕೆ ಮಾಡುವ ಪರವಾನಿಗೆಯನ್ನು ಪಡೆದುಕೊಂಡು ಆದರೆ ಸದಿ ತಮ್ಮಪ್ಪ ಗೌಡರವರು ಮೂರನೇಯ ವ್ಯಕ್ತಿಗಳಿಗೆ ಗಣಿಗಾರಿಕೆ ಮಾಡಲು ಅನುಮತಿಯನ್ನು ನೀಡಿರುತ್ತಾರೆ. ಪ್ರಸ್ತುತ ಗಣಿಗಾರಿಕೆ ಮಾಡುತ್ತಿರುವ ಅಜೀಜ್ ಕಾವು, ಡೆಲ್ಮಾ ಎಂಟರ್‌ಪ್ರೆಸ್ ಮತ್ತು ಸಿದ್ಧ ಗೌಡ ಮೈಸೂರು ಎನ್ನುವವರು ಕಾನೂನುಬಾಹಿರವಾಗಿ ತೋಟೆಗಳನ್ನು ಬಳಸಿ ಕಲ್ಲುಗಳನ್ನು ಒಡೆಯುತ್ತಿರುವುದರಿಂದ ಪರಿಸರದಲ್ಲಿರುವ ಮನೆಗಳಿಗೆ ಹಾನಿಯಾಗಿದ್ದು ಮನೆಗಳ ಗೋಡೆಗಳು ಒಡೆದಿರುತ್ತದೆ. ಪರಿಸರದ ರಸ್ತೆಗಳೆಲ್ಲಾ ಹಾನಿಯಾಗಿದ್ದು ರಸ್ತೆಯಲ್ಲಿ ಕಲ್ಲಿನ ಹುಡಿಗಳು ಬಿದ್ದು ರಸ್ತೆಯಲ್ಲಿ ಜನರು ಓಡಾಡದಂತೆ ಆಗಿರುತ್ತದೆ. ಮಾತ್ರವಲ್ಲದೆ ರಸ್ತೆಯ ಧೂಳುನ್ನು ತೆಗೆಯುವರೆ ರಸ್ತೆಗೆ ನೀರು ಹಾಕುತ್ತಿದ್ದು ರಸ್ತೆಯೆಲ್ಲಾ ಕೆಸರುಮಯವಾಗಿರುತ್ತದೆ.

ಗಣಿಗಾರಿಕೆ ನಡೆಯುತ್ತಿರುವ ಕೇವಲ 383 ಮೀಟರ್ ದೂರದಲ್ಲಿ ಸರಕಾರಿ



ಹಿರಿಯ ಪ್ರಾಥಮಿಕ ಶಾಲೆ ಮುಡ್ನೂರು ಮರ್ಕಂಜ, 500 ಮೀಟರ್ ದೂರದಲ್ಲಿ ಮೀನುಂಗುರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, 150 ಮೀಟರ್ ದೂರದಲ್ಲಿ ಹರಿಜನ ಕಾಲೋನಿ, 150 ಮೀಟರ್ ದೂರದಲ್ಲಿ ಕುಡಿಯುವ ನೀರಿನ 2 ಕೊಳವೆ ಬಾವಿಗಳು ಮತ್ತು ನೀರಿನ ಟ್ಯಾಂಕ್ ಸರಕಾರಿ ಆಸ್ಪತ್ರೆ, 400 ಮೀಟರ್ ದೂರದಲ್ಲಿ ಮರ್ಕಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಯುವಕ ಮಂಡಲದ ಕಟ್ಟಡ ಇರುತ್ತದೆ. ಒಂದು ವರ್ಷದ ಹಿಂದೆ ತೋಟೆ ಬಳಸಿ ಗಣಿಗಾರಿಕೆ ಮಾಡಿರುವುದರಿಂದ ಮೀನಂಗೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಗರ್ಭಗುಡಿಯು ಒಡೆದಿದ್ದು ಹಾನಿಗೊಂಡಿರುತ್ತದೆ. ಜನನಿಬಿಡವಾದ ಸ್ಥಳದಲ್ಲಿ ಗಣಿಗಾರಿಕೆ ಮಾಡಲು ಅನುಮತಿ ನೀಡಿರುವುದರಿಂದ ಅಳವುಪಾರ ಪ್ರದೇಶದ ಜನರಿಗೆ ಜೀವನ ನಡೆಸಲು ದುಸ್ತರವಾಗಿರುತ್ತದೆ. ಕಲ್ಲುಕೋರೆಯಲ್ಲಿ ಸ್ಫೋಟಿಸುವ ತೋಟೆಗಳ ಭೀಕರ ಸ್ಫೋಟಕ್ಕೆ ವಾಸ್ತವ್ಯದ ಮನೆಗಳು, ಅಂಗಡಿಗಳ ಗೋಡೆಗಳು ಹಾನಿಗೀಡಾಗಿದ್ದು ನಾಗರಿಕರು ವಾಸಿಸಲು ಭಯಭೀತರಾಗುವಂತಾಗಿರುತ್ತದೆ. ಟಿಪ್ಪರ್ ಲಾರಿಯಲ್ಲಿ ವಿಪರೀತ ಜಲ್ಲಿಕಲ್ಲುಗಳನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ರಸ್ತೆಯಲ್ಲಿ ಚೆಲ್ಲಿ ಜನರು ನಡೆದಾಡದಂತಾಗಿರುತ್ತದೆ. ಮಾತ್ರವಲ್ಲದೆ ರಸ್ತೆಯಲ್ಲಿ ಹರಡಿರುವ ಜಲ್ಲಿ ಕಲ್ಲಿನ ಹುಡಿಯಿಂದಾಗಿ ಶಾಲಾ ಮಕ್ಕಳ, ಪರಿಸರದ ಜನರ ಆರೋಗ್ಯಕ್ಕೆ ತೊಂದರೆಯಾಗಿರುತ್ತದೆ.

ನಮ್ಮ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಗಣಿಗಾರಿಕೆಯನ್ನು ನಿಲ್ಲಿಸಿರುವುದಿಲ್ಲ. ಹಾಗಾಗಿ ನ್ಯಾಯೋಚಿತ ಬೇಡಿಕೆ ಮತ್ತು ಒತ್ತಾಯಕ್ಕೆ ಮಣಿಯದಿದ್ದಲ್ಲಿ ಮರ್ಕಂಜ ಗ್ರಾಮದಲ್ಲಿ ಚುನಾವಣಾ ಬಹಿಷ್ಕಾರದ ಬ್ಯಾನರ್ ಅಳವಡಿಸುವುದು ಮತ್ತು ಉಪವಾಸ ಸತ್ಯಾಗ್ರಹ, ಹೋರಾಟ ನಡೆಸುವುದೆಂದು ನಿರ್ಧಾರ ಮಾಡಿರುತ್ತೇವೆ ಎಂದು ತಿಳಿಸಿದ್ದಾರೆ. ವೆಂಕಟರಮಣ ಅಂಗಡಿಮಜಲು, ಬೋಜಪ್ಪ ಕೊಚ್ಚಿ, ನವೀನ್ ನಳಿಯಾರು, ಚರಣ್ ಗುತ್ತುಮಜಲು, ಯತೀಶ್ ಕಂಜಿಪಿಲಿ, ನವೀನ್ ದೊಡ್ಡಿಹಿತ್ಲು, ರಮೇಶ್ ಪಡ್ಡಂಬೈಲು, ನಾಗಮ್ಮ ನಾಯ್ಕ್ , ಧರ್ಮವತಿ ಪಡ್ಡಂಬೈಲು, ಬಿಯಾಳು, ದಿವಾಕರ ಕಾಳಮನೆ, ದಿವಾಕರ ಗುರುಂಪು ಮೊದಲಾದವರು ಇದ್ದರು.

## ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತಿ ಉತ್ಸವ

ಇತಿಹಾಸ ಪ್ರಸಿದ್ಧ ಮಾಗಣೆ ಕ್ಷೇತ್ರವಾದ ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತಿ ಉತ್ಸವ, ಚಂಡಿಕಾ ಹೋಮ, 108 ನಾಳಿಕೇರ ಗಣಪತಿ ಹವನ, ಮೂಡಪ್ಪ ಸೇವೆ ಹಾಗೂ ಶ್ರೀ ಸತ್ಯನಾರಾಯಣ ಪೂಜೆಯು ಕೆಮ್ಮಿಂಜೆ ಬ್ರಹ್ಮಶ್ರೀ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಎ.10 ಮತ್ತು ಎ.11 ರಂದು ನಡೆಯಿತು.



ಎ.10ರಂದು ರಾತ್ರಿ ದೇವತಾ ಪ್ರಾರ್ಥನೆ, ಆಚಾರ್ಯವರಣ, ಸ್ವಸ್ತಿ ಪುಣ್ಯಾಹವಾಚನ, ಪ್ರಾಸಾದ ಶುದ್ಧಿ, ರಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಪೂಜಾ ಬಲಿ, ಮಹಾಪೂಜೆ, ಗಣಪತಿ ದೇವರಿಗೆ ಮೂಡಪ್ಪ ಸೇವೆ ಮತ್ತು ರಂಗಪೂಜೆ, ಪ್ರಸಾದ ವಿತರಣೆ ನಡೆಯಿತು. ಎ.11ರಂದು ಬೆಳಿಗ್ಗೆ 108 ತೆಂಗಿನಕಾಯಿ ಮಹಾಗಣಪತಿ ಹೋಮ, ಚಂಡಿಕಾಹೋಮ, ಶ್ರೀ ಸತ್ಯನಾರಾಯಣ ಪೂಜೆ, ಬಿಂಬ ಶುದ್ಧಿ, ಪಂಚವಿಂಶತಿ ಕಲಶ ಪೂಜೆ ನಡೆಯಿತು. ನಂತರ ಹೋಮದ ಪೂರ್ಣಾಹುತಿ, ಸುವಾಸಿನಿ ಪೂಜೆ ಮಧ್ಯಾಹ್ನ ಶ್ರೀ ದೇವರಿಗೆ ಪಂಚಾಮೃತಾಭಿಷೇಕ, ಪಂಚವಿಂಶತಿ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆಯಾಗಿ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತಾಧಿಕಾರಿ ಜಯಪ್ರಕಾಶ್ ಅಲೆಕ್ಕಾಡಿ, ಪವಿತ್ರಪಾಣಿ ಸುಬ್ರಹ್ಮಣ್ಯ ನಿಡ್ವಣ್ಣಾಯ ಕುಮಾರಮಂಗಲ, ಪ್ರಧಾನ ಅರ್ಚಕರಾದ ಶ್ರೀನಿವಾಸ ಹೆಬ್ಬಾರ್, ದೇವಸ್ಥಾನದ ಕಚೇರಿ ವ್ಯವಸ್ಥಾಪಕ ವಸಂತ ಪೆರುವಾಜೆ, ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷರಾದ ಪಿ.ಪದ್ಮನಾಭ ಶೆಟ್ಟಿ ಪೆರುವಾಜೆ, ಹರ್ಷಿತ್ ಪೆರುವಾಜೆ ಹಾಗೂ ಅನೇಕ ಭಕ್ತಾದಿಗಳು ಉಪಸ್ಥಿತರಿದ್ದರು.




# ಏ.17 : ಬಿಜೆಪಿ ಅಭ್ಯರ್ಥಿ ಬ್ರಿಜೇಶ್ ಚೌಟ ಸುಳ್ಯ ವಿಧಾನಸಭಾ ಕ್ಷೇತ್ರ ಪ್ರವಾಸ



ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕ್ಯಾಪ್ಟನ್ ಬ್ರಿಜೇಶ್ ಚೌಟ ಏ.17 ರಂದು ಸುಳ್ಯ ವಿಧಾನಸಭಾ ಕ್ಷೇತ್ರದ ಪ್ರವಾಸ ಕೈಗೊಳ್ಳಲಿದ್ದಾರೆ. ಏ.17 ರಂದು ಬೆಳಿಗ್ಗೆ 8 ಗಂಟೆಗೆ ಮಂಡೆಕೋಲು ಸಹಕಾರಿ ಸಂಘದ ಸಭಾಂಗಣದಲ್ಲಿ ಕಾರ್ಯಕರ್ತರ ಸಭೆ, ಬೆಳಿಗ್ಗೆ 10 ಗಂಟೆಗೆ ಕೆ.ವಿ.ಜಿ ಕ್ಯಾಂಪಸ್ ಭೇಟಿ, ಬೆಳಿಗ್ಗೆ 11 ಗಂಟೆಗೆ ಅರಂತೋಡು ಸಹಕಾರಿ ಸಂಘದ ಸಭಾಭವನದಲ್ಲಿ ಕಾರ್ಯಕರ್ತರ ಸಭೆ, ಅಪರಾಹ್ನ 1 ಗಂಟೆಗೆ ತೊಡಿಕಾನ ಶ್ರೀ ಮಲ್ಲಿಕಾರ್ಜುನ ದೇವರ ದರ್ಶನ ಪಡೆಯಲಿದ್ದಾರೆ. ಅಪರಾಹ್ನ 2.30 ಕ್ಕೆ ಗುತ್ತಿಗಾರಿನ ಹಿರಿಯ ಕಾರ್ಯಕರ್ತರಾದ ಬಿ.ಕೆ.ಬೆಳ್ಯಪ್ಪ ಗೌಡ ಕಡ್ತಲ್ಕಜೆ ಇವರ ಮನೆ ಭೇಟಿ, ಅಹರಾಹ್ನ 3.00 ಗಂಟೆಗೆ ಹರಿಹರ, ಕೊಲ್ಲಮೊಗ್ರ, ಬಾಳುಗೋಡು ಕಾರ್ಯಕರ್ತರ ಸಭೆ ಹರಿಹರದಲ್ಲಿ ನಡೆಯಲಿದೆ. ಅಪರಾಹ್ನ 3.30 ಕ್ಕೆ ಕಡಬ ತಾಲೂಕಿನ ಕುಲ್ಕುಂದ ಬಸವೇಶ್ವರ ದೇವಸ್ಥಾನ ಭೇಟಿ, ದೇವರ ದರ್ಶನ, 4 ಗಂಟೆಗೆ ಕೊಂಬಾರು ಗ್ರಾಮದ ಬೋಲ್ನಡ್ಕದಲ್ಲಿ ಕಾರ್ಯಕರ್ತರ ಭೇಟಿ, ಅಪರಾಹ್ನ 4.30 ಕ್ಕೆ ಮರ್ಧಾಳ ಮಹಾಲಿಂಗೇಶ್ವರ ದೇವಸ್ಥಾನ ಭೇಟಿ, ದೇವರ ದರ್ಶನ, 5.00 ಕ್ಕೆ ಇಚ್ಲಂಪಾಡಿ ಶ್ರೀ ಉಳ್ಳಾಲ್ತಿ ದೇವಸ್ಥಾನ ಭೇಟಿ, ದೇವರ ದರ್ಶನ, 5.30 ಕ್ಕೆ ಗೋಳಿತ್ತೊಟ್ಟು ಶ್ರೀ ಸಿದ್ಧಿವಿನಾಯಕ ಸಭಾಭವನದಲ್ಲಿ ಕಾರ್ಯಕರ್ತರ ಸಭೆ ನಡೆಯಲಿದೆ ಎಂದು ಮಂಡಲ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಡಿಎಸ್ ಯುವ ಮುಖಂಡ ಪ್ರವೀಣ್ ಮುಂಡೋಡಿ ಕಾಂಗ್ರೆಸ್ ಸೇರ್ಪಡೆ





ಲೋಕಸಭಾ ಚುನಾವಣೆಗೆ ಬಿಜೆಪಿಯೊಂದಿಗೆ ಜೆ.ಡಿ .ಎಸ್ ಮೈತ್ರಿ ಬೆನ್ನಲ್ಲೇ ಜೆಡಿಎಸ್ ನ ತಳಮಟ್ಟದ ನಾಯಕರು ಹಾಗೂ ಕಾರ್ಯಕರ್ತರಲ್ಲಿ ಭಿನ್ನಮತ ಭುಗಿಲೆದ್ದಿದ್ದು ಹಲವಾರು ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಕೈ ಹಿಡಿಯುತ್ತಿದ್ದಾರೆ.

ಸುಳ್ಯದ ಜೆಡಿಎಸ್ ಯುವ ಮುಖಂಡ ಪ್ರವೀಣ್ ಮುಂಡೋಡಿ ಏ.11ರಂದು ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ. ಕಳೆದ ಲೋಕ ಸಭಾ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಮಿಥುನ್ ರೈ ಅವರಿಗೆ ಮತ ಕೇಳಿದ್ದೆವು. ಈಗ ಮತ್ತೆ ಬಿಜೆಪಿ ಅಭ್ಯರ್ಥಿ ಜೊತೆಗೂಡಿ ಮತಯಾಚನೆ ಮಾಡುವುದು ಸಾಧ್ಯವಿಲ್ಲ ಹಾಗೂ ಕಾಂಗ್ರೆಸ್ ನ ಅಭಿವೃದ್ಧಿ ಪರ ಆಡಳಿತ ಮೆಚ್ಚಿ ಕಾಂಗ್ರೆಸ್ ಸೇರ್ಪಡೆಯಾಗಿದ್ದೇನೆ ಎಂದು ಅವರು ತಿಳಿಸಿದ್ದಾರೆ. ಮುಂದೆ ಹಲವು ಮಂದಿ ಕಾಂಗ್ರೆಸ್ ಸೇರ್ಪಡೆಯಾಗುವ ಸುಳಿವು ನೀಡಿದ್ದಾರೆ.

ಏ.11ರಂದು ಅವರನ್ನು ಪಂಜದಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಸಿ.ಜಯರಾಮ ಅವರು ಪಕ್ಷದ ಶಾಲು ಹೊದಿಸಿ ಕಾಂಗ್ರೆಸ್‌ಗೆ ಬರಮಾಡಿಕೊಂಡರು.

# ಕೆ.ವಿ.ಜಿ ಇಂಜಿನಿಯರಿಂಗ್ ಕಾಲೇಜಿನ ರೀಸರ್ಚ್ ಸ್ಕಾಲರ್ ಪ್ರೊ.ಸಲೀಮ್ ಮಲಿಕ್ ಎಸ್‌ರವರಿಗೆ ಡಾಕ್ಟರೇಟ್ ಪದವಿ



ಕೆ.ವಿ.ಜಿ. ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ರೀಸರ್ಚ್ ಸೆಂಟರ್‌ನ ವಿದ್ಯಾರ್ಥಿ ಪ್ರೊಫೆಸರ್ ಸಲೀಮ್ ಮಲಿಕ್‌ಎಸ್. ಇವರ ಸಂಶೋಧನಾ ಪ್ರಬಂಧಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇವರು ವಿಟಿಯುನ ಎಕ್ಸಿಕ್ಯುಟಿವ್ ಕೌನ್ಸಿಲ್ ಸದಸ್ಯರು, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಾಗೂ ಕಂಪ್ಯೂಟರ್ ಸೈನ್ಸ್& ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಉಜ್ವಲ್ ಯು.ಜೆ. ಇವರ ಮಾರ್ಗದರ್ಶನದಲ್ಲಿ "Build out of an efficacious Arbitrator Miniature in Scolastic Systamatics for Predictive Anatamization" ಎಂಬ ವಿಷಯದ ಕುರಿತು ಮಹಾಪ್ರಬಂಧವನ್ನು ಮಂಡಿಸಿದ್ದರು. ಇವರು ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜಿನ 11 ವರ್ಷಗಳ ಕಾಲ ಸಹಾಯಕ ಪ್ರಾಧ್ಯಪಕರಾಗಿ ಕಂಪ್ಯೂಟರ್ ಸೈನ್ಸ್& ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದರು. ಇವರ ಹಲವಾರು ಪ್ರಬಂಧಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಣೆಗೊಂಡಿದೆ. ಇವರನ್ನು ಎ.ಓ.ಎಲ್.ಇ.(ರಿ) ಕಮಿಟಿ 'ಬಿ' ಇದರ ಚೇರ್‌ಮೆನ್ ಡಾ. ರೇಣುಕಾಪ್ರಸಾದ್ ಕೆ.ವಿ., ಕಾರ್ಯದರ್ಶಿ ಡಾ. ಜ್ಯೋತಿಆರ್. ಪ್ರಸಾದ್, ಮೆಂಬರ್‌ಡಾ. ಅಭಿಜ್ಞಕೆ.ಆರ್.,ವಿಟಿಯುನಎಕ್ಸಿಕ್ಯುಟಿವ್‌ಕೌನ್ಸಿಲ್ ಸದಸ್ಯರು, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಾಗೂ ಕಂಪ್ಯೂಟರ್ ಸೈನ್ಸ್& ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಉಜ್ವಲ್ ಯು.ಜೆ., ಪ್ರಾಂಶುಪಾಲರು ಡಾ. ಸುರೇಶ ವಿ., ಉಪಪ್ರಾಂಶುಪಾಲರು ಮತ್ತು ಡೀನ್ ಸ್ಟುಡೆಂಟ್ ಅಫೇರ್ಸ್ ಡಾ. ಶ್ರೀಧರ್ ಕೆ., ಪ್ರೊಫೆಸರ್, ಕಂಪ್ಯೂಟರ್ ಸೈನ್ಸ್& ಇಂಜಿನಿಯರಿಂಗ್ ವಿಭಾಗ/ ಡೀನ್‌ರೀಸರ್ಚ್ ಡಾ. ಸವಿತಾ ಸಿ.ಕೆ., ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ಸಿಬ್ಬಂಧಿ ವರ್ಗದವರು ಅಭಿನಂದಿಸಿರುತ್ತಾರೆ.

# ಬೆಳ್ಳಾರೆ ಪೇಟೆಯ ರಸ್ತೆಯುದ್ದಕ್ಕು ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್ ಪೂಜಾರಿ ಮತಯಾಚನೆ



ಸುಳ್ಯ: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಏ.11ರಂದು ಮುಂಜಾನೆಯಿಂದ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮತಭೇಟೆಗೆ ಇಳಿದು ಸಂಜೆಯಾಗುತ್ತಿದ್ದಂತೆ ಬೆಳ್ಳಾರೆ ಪೇಟೆಗೆ ಆಗಮಿಸಿ ಮತಯಾಚನೆ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷರಾದ ಮಾಜಿ ಸಚಿವರಾದ ರಾಮನಾಥ ರೈ, ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಿ ಕೃಷ್ಣಪ್ಪ ಪ್ರಮುಖರಾದ ಎನ್ ಜಯಪ್ರಕಾಶ್ ರೈ, ಕಿರಣ್ ಬುಡ್ಲೆಗುತ್ತು, ಮಹೇಶ್ ಕುಮಾರ್ ಕರಿಕ್ಕಳ, ಸರಸ್ವತಿ ಕಾಮತ್, ಸಿದ್ದಿಕ್ ಕೊಕ್ಕೊ, ರಾಜು ಪಂಡಿತ್, ಕೀರ್ತನ್ ಕೊಡಪಾಲ, ಸೇರಿದಂತೆ ಪ್ರಮುಖ ಕಾರ್ಯಕರ್ತರು ನಾಯಕರು ಉಪಸ್ಥಿತರಿದ್ದರು.

# ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್ ಪೂಜಾರಿ ಭೇಟಿ





ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಏ.11ರಂದು ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್ ಪೂಜಾರಿ ಭೇಟಿ ಪ್ರಾರ್ಥನೆ ಸಲ್ಲಿಸಿದರು.

ದೇವಸ್ಥಾನಕ್ಕೆ ಆಗಮಿಸಿದ ಪದ್ಮರಾಜ್ ಅವರನ್ನು ಪಂಜ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರು ಶಾಲು ಹೊದಿಸಿ ಸನ್ಮಾನಿಸಿ, ಅವರ ಗೆಲುವಿಗೆ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಕಲ್ಮಡ್ಕ ಗ್ರಾಪಂ ಅಧ್ಯಕ್ಷ ಮಹೇಶ್ ಕರಿಕ್ಕಳ, ಸುಳ್ಯ ಬ್ಲಾಕ್ ಅಧ್ಯಕ್ಷ ಪಿ.ಸಿ. ಜಯರಾಂ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಧರ್ಮಣ್ಣ ಗರಡಿ, ಸಂತೋಷ್ ರೈ ಅಡ್ಡೈಲು, ಉಮೇಶ್ ಬುಡೆಂಗಿ, ರಜಿತ್ ಭಟ್ ಪಂಜದಬೀಡು, ಸತ್ಯನಾರಾಯಣ ಭಟ್ ಕಾಯಂಬಾಡಿ, ಮಾಲಿನಿ ಕುದ್ವ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಲಕ್ಷೀಶ ಗಬ್ಬಲಡ್ಕ ಮತ್ತಿತರರು ಉಪಸ್ಥಿತರಿದ್ದರು.

# ಪಿ.ಯು.ಸಿ ಪರೀಕ್ಷೆಯಲ್ಲಿ ಉಬರಡ್ಕದ ಶ್ರೀರಕ್ಷಾಗೆ ಡಿಸ್ಟಿಂಕ್ಷನ್



2023–24 ನೇ ಸಾಲಿನ ಪಿ ಯು ಸಿ ಫಲಿತಾಂಶ ಪ್ರಕಟಗೊಂಡಿದ್ದು ಸುಳ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕು. ಶ್ರೀರಕ್ಷಾ ಇವರು ವಿಜ್ಞಾನ ವಿಭಾಗದಲ್ಲಿ 540 ಅಂಕ ಗಳನ್ನು ಪಡೆಯುವ ಮೂಲಕ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಗೊಂಡಿದ್ದಾರೆ. ಇವರು ಉಬರಡ್ಕ ದಿವಾಕರ ಪಾಟಾಳಿ ಮತ್ತು ಅಂಗನವಾಡಿ ಕಾರ್ಯಕರ್ತೆ ಪ್ರೇಮಲತಾ ಇವರ ಪುತ್ರಿ.

# ರಾತ್ರಿ ಸಂಚರಿಸುತ್ತಿದೆ ಟನ್ ಗಟ್ಟಲೇ ಅಕ್ರಮ ಮರಳು – ಗಾಢ ನಿದ್ರೆಗೆ ಜಾರಿದ ಗಣಿ ಇಲಾಖೆ – ಕರೆ ಮಾಡಿದರೂ ಸ್ವೀಕರಿಸದ ಗಣಿ ಅಧಿಕಾರಿಗಳು




ಸುಳ್ಯದಲ್ಲಿ ಪೋಲಿಸ್ ಮತ್ತು ಕಂದಾಯ ಇಲಾಖೆಯು ಹದ್ದಿನ ಕಣ್ಣಿಟ್ಟು ಭೂಮಿಯನ್ನು ಬಗೆದು ಕಳವು ಗೈಯುವ ಕಳ್ಳರ ವಿರುದ್ಧ ಸಮರ ಸಾರುತ್ತಿದೆ. ಇತ್ತ ಗಣಿ ಇಲಾಖೆ ಮಾತ್ರ ಗಾಢ ನಿದ್ದೆಯಲ್ಲಿದೆ. ಸುಳ್ಯ, ಕಡಬ ಹಾಗೂ ಕೊಡಗು ಜಿಲ್ಲೆಯ ಸಂಪಾಜೆ, ಪೆರಾಜೆ ಭಾಗಗಳಿಂದ ಅಕ್ರಮವಾಗಿ ಮರಳು ಸಾಗಾಟ ನಡೆಸುತ್ತಿದ್ದು ಪೋಲಿಸ್ ಮತ್ತು ಕಂದಾಯ ಇಲಾಖೆಯ ಕಣ್ಣಿಗೆ ಮಣ್ಣೆರೆಚಿ ಟಿಪ್ಪರ್ ಲಾರಿಗಳಲ್ಲಿ ಸಾಗಾಟ ನಡೆಯುತ್ತಿದೆ. ಲಾರಿ ಜತೆಗೆ ಸ್ಕಾಡ್ ರೀತಿಯಲ್ಲಿ ದ್ವಿಚಕ್ರ ವಾಹನದಲ್ಲಿ ಇಬ್ಬರು ಹೋಗುತ್ತಾ ದೂರವಾಣಿ ಮೂಲಕ ತಿಳಿಸುತ್ತಾ ಪೋಲೀಸರ ಕಣ್ಣು ತಪ್ಪಿಸಿ ಸಾಗಾಟ ಮಾಡುತ್ತಾರೆ. ಇತ್ತ ಗಣಿ ಇಲಾಖೆಗೆ ಸಾರ್ವಜನಿಕರು ಹಲವಾರು ಬಾರಿ ಕರೆ ಮಾಡಿದರು ಕರೆ ಸ್ವೀಕ–ರಿಸದೇ ಅಕ್ರಮ ಮರಳು ಸಾಗಾಟದಾರರ ಪರವಾಗಿ ನಿಂತಂತೆ ಕಾಣಿಸುತ್ತಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

**ಗಣಿ ಇಲಾಖೆಯ ದೂರವಾಣಿ ಸಂಖ್ಯೆಯ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ಅಮರ ಸುದ್ದಿ:** ಇತ್ತ ಸಾರ್ವಜನಿಕರು ದೂರಿನ ಹಿನ್ನಲೆಯಲ್ಲಿ ಅಮರ ಸುಳ್ಯ ಸುದ್ದಿ ಕಛೇ–ರಿಯಿಂದ ಮುಂಜಾನೆಯಿಂದ ಸಂಜೆಯ ತನಕ ಪ್ರಯತ್ನಿಸಿದರು ಕರೆ ಸ್ವೀಕರಿಸದ ಅಧಿಕಾರಿಗಳ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತಿದ್ದಂತೆ ರಾತ್ರಿ ಸಂಚ–ರಿಸುವ ಲಾರಿಗಳ ಸಂಖ್ಯೆ ಇಳಿಕೆಯಾಗಿದೆ ಎಂದು ಜನತೆ ಹೇಳುತ್ತಿದ್ದಾರೆ . ಇತ್ತ ಮರ್ಕಂಜದಲ್ಲಿಯು ಗಣಿಗಾರಿಕೆ ನಡೆಸಲು ಪರವಾಣಿಗೆ ದೊರೆಯುತ್ತಿದ್ದಂತೆ ಗ್ರಾಮಸ್ಥರು ಸರಕಾರದ ವಿರುದ್ಧ ತಿರುಗಿ ಬಿದ್ದಿದ್ದು ಮುಂದಿನ ದಿನಗಳಲ್ಲಿ ಅಕ್ರಮ ಮರಳು ಗಣಿ ನಡೆಸುವವರ ವಿರುದ್ಧ ಜನತೆ ಪ್ರತಿಭಟಿಸುವ ದಿನಗಳು ದೂರವಿಲ್ಲ .

**ಮರಳು ಕಾಟಿಂಗ್ ಮಾಡುತ್ತಿರುವ ಅಕ್ರಮ ಗಣಿ ಮಾಲೀಕರು:** ಕೃತಕವಾಗಿ ಮರಳು ಅಭಾವ ಸೃಷ್ಟಿಸಿ, ಬೇಡಿಕೆ ಬರುವಂತೆ ಮಾಡಿ ದುಪ್ಪಟ್ಟು ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಸ್ಥಳೀಯರಿಗೆ ಮಣ್ಣು ಮಿಶ್ರಿತ ಮರಳನ್ನು ಹಾಕುತ್ತಿದ್ದು ಉಳಿದವುಗಳನ್ನು ನೆರೆಯ ಕೇರಳ ಮತ್ತು ಕೊಡಗು ಜಿಲ್ಲೆಗಳಿಗೆ ಸಾಗಾಟ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ ಇತ್ತ ಈ ಹಿಂದೆ ಗಣಿ ಮಾಫಿಯಾವಾಗಿ ಬಳ್ಳಾರಿ ಗುರುತಿಸಿಕೊಂಡು ಬಳ್ಳಾರಿ ರಿಪಬ್ಲಿಕ್ ಎಂದೇ ಬಿಂಬಿತವಾಗಿದ್ದವು ಅಲ್ಲದೇ ರಾಜಕೀಯ ವ್ಯಕ್ತಿಗಳ ಹಿಂದುಗಡೆಯಿಂದ ಹೋಗುವ ಸಂದರ್ಭದಲ್ಲಿ ಸುಳ್ಯದಲ್ಲಿ ಅಕ್ರಮ ಮರಳುಗಣಿಗಾರಿಕೆ ಮಾಡುವವರು ಜೊತು ಬೀಳುವುದು ಸರ್ವೆ ಸಾಮಾನ್ಯವಾಗಿ ಕಾಣಸಿಗುತ್ತದೆ ಇವರಿಗೆ ರಾಜಕೀಯ ವ್ಯಕ್ತಿಗಳ ಸಹಾಯ ಇದೆಯೋ ಎಂಬ ಅನುಮಾನ ಸೃಷ್ಟಿಯಾಗಿದ್ದು ಇತ್ತ ಇದೇ ಮಾದರಿಯಲ್ಲಿ ಇದೀಗ ಕೆಂಪು ಕಲ್ಲು ಮತ್ತು ಮರಳು ಅಕ್ರಮ ಗಣಿಗಾರಿಕೆ ನಡೆಯಿತ್ತಿದ್ದು ಇನ್ನೊಂದು ಬಳ್ಳಾ–ರಿಯಾಗದಿರಲಿ. ಇನ್ನಾದರು ಗಣಿ ಇಲಾಖೆ ಎಚ್ಚೆತ್ತು ಸುಳ್ಯ ಮತ್ತು ಕೊಡಗು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟ ಅಕ್ರಮ ಗಣಿಗಳ ಕುರಿತು ಕ್ರಮಕೈಗೊಳ್ಳುತ್ತಾರೆಯೇ ಎಂದು ಕಾದು ನೋಡಬೇಕಿದೆ.

# ಬದುಕನ್ನೊಮ್ಮೆ ಹಿಂತಿರುಗಿ ನೋಡಿದಾಗ...

ನಮ್ಮ ಜೀವನದಲ್ಲಿ ಹುಟ್ಟಿನಿಂದ ಸಾವಿನವರೆಗೆ ಬಾಲ್ಯಾವಸ್ಥೆ, ಪ್ರೌಢಾವಸ್ಥೆ, ಯೌವ್ವನಾವಸ್ಥೆ ಹಾಗೂ ವೃದ್ಧಾಪ್ಯ ಎನ್ನುವ ನಾಲ್ಕು ಹಂತಗಳಿರುತ್ತವೆ. ಪ್ರತಿಯೊಂದು ಹಂತಗಳಲ್ಲಿಯೂ ಕೂಡ ನಮಗೆ ಆ ಹಂತಗಳಿಗನುಗುಣವಾದ ಕರ್ತವ್ಯಗಳು ಇರುತ್ತವೆ. ಉದಾಹರಣೆಗೆ ಬಾಲ್ಯಾವಸ್ಥೆಯಲ್ಲಿ ಆಟ, ತುಂಟಾಟಗಳ ಜೊತೆಗೆ ನಡೆಯುವ, ಮಾತನಾಡುವ ಮುಂತಾದ ಪ್ರಕ್ರಿಯೆಗಳನ್ನು ಕಲಿಯುವಂತಹದ್ದು, ಹಾಗೂ ಪ್ರೌಢಾವಸ್ಥೆಯಲ್ಲಿ ಆಟ–ಪಾಠ, ಓದು–ಬರಹ ಸೇರಿದಂತೆ ಭವಿಷ್ಯದ ಬದುಕಿಗೆ ಅಡಿಪಾಯ ಹಾಕುವಂತಹ ಕರ್ತವ್ಯಗಳು ಇರುತ್ತವೆ. ಯೌವ್ವನಾವಸ್ಥೆಯಲ್ಲಿ ದುಡಿಮೆ, ಮನೆಯ ಜವಾಬ್ದಾರಿಗಳು ಸೇರಿದಂತೆ ಅನೇಕ ಜವಾಬ್ದಾರಿಗಳು ನಮ್ಮ ಹೆಗಲ ಮೇಲೆ ಬೀಳುತ್ತವೆ. ಅದೇ ರೀತಿ ವೃದ್ಧಾಪ್ಯದಲ್ಲಿ ಹಿರಿಯರಾಗಿ ತಾವು ಜೀವನಪೂರ್ತಿ ಪಡೆದಂತಹ ಅನುಭವಗಳನ್ನು, ಆ ಅನುಭವಗಳಿಂದ ಕಲಿತ ಪಾಠಗಳನ್ನು ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ತಿಳಿಸುವುದರೊಂದಿಗೆ ಅವರಿಗೆ ಯಾವ ರೀತಿ ಜೀವನ ನಡೆಸಬೇಕೆಂದು ಮಾರ್ಗದರ್ಶನ ನೀಡುವ ಕರ್ತವ್ಯಗಳು ಇರುತ್ತವೆ. ಹೀಗೆ ಬದುಕಿನ ಪ್ರತೀ ಹಂತಗಳಲ್ಲೂ ಆ ಹಂತಗಳಿಗನುಗುಣವಾಗಿ ಇರುವಂತಹ ಕರ್ತವ್ಯಗಳನ್ನು ನಿರ್ವಹಿಸಲು ನಾವು ಬದುಕಿನೊಂದಿಗೆ ಓಡುತ್ತಲೇ ಇರಬೇಕು. "ಬದುಕು ಯಾರಿಗಾಗಿಯೂ ನಿಲ್ಲುವುದಿಲ್ಲ, ನಾವು ಬದುಕಿನೊಂದಿಗೆ ಓಡಿದರೆ ಮಾತ್ರ ವರ್ತಮಾನದೊಂದಿಗೆ ಬದುಕನ್ನು ಸಾಗಿಸಲು ಸಾಧ್ಯ. ಇಲ್ಲದಿದ್ದರೆ ಬದುಕು ನಮ್ಮನ್ನು ಬಿಟ್ಟು ಮುಂದೆ ಸಾಗುತ್ತದೆ. ನಾವು ಹಿಂದೆ ಉಳಿದುಬಿಡುತ್ತೇವೆ" ಎನ್ನುವ ಮಾತಿನಂತೆ ಪ್ರತಿಯೊಬ್ಬರೂ ಕೂಡ ಅವರವರ ಬದುಕಿನ ಹಂತಗಳಿಗನುಗುಣವಾಗಿ ಓಡುತ್ತಲೇ ಇರಬೇಕು, ತಮ್ಮ ಬದುಕಿನ ಕರ್ತವ್ಯಗಳನ್ನು ನಿರ್ವಹಿಸುತ್ತಲೇ ಇರಬೇಕು.

ಆದರೆ ಕೆಲವೊಮ್ಮೆ ನಾವುಗಳು ನಮ್ಮ ಬದುಕಿನ ಕರ್ತವ್ಯಗಳನ್ನು ನಿರ್ವಹಿಸುವ ಭರದಲ್ಲಿ, ಬದುಕಿನೊಂದಿಗೆ ಓಡುವ ಹುಮ್ಮಸ್ಸಿನಲ್ಲಿ ಹಲವಾರು ತಪ್ಪುಗಳನ್ನು ಮಾಡುತ್ತಿರುತ್ತೇವೆ. ನಮಗೆ ತಿಳಿದೋ ತಿಳಿಯದೆಯೋ ಹಲವರ ಮನಸ್ಸಿಗೆ ನೋವುಂಟುಮಾಡುತ್ತಿರುತ್ತೇವೆ. ಆದರೆ ವಾಸ್ತವ ಏನೆಂದರೆ ಆ ಕ್ಷಣ–ಕ್ಕೆ ನಮಗೆ ನಾವು ಮಾಡಿದ್ದು ತಪ್ಪು ಎಂದೆನಿಸುವುದಿಲ್ಲ. ಆದರೆ ನಾವು ಹಂತಹಂತವಾಗಿ ಬೆಳೆದಂತೆಲ್ಲಾ, ಬದುಕಿನಲ್ಲಿ ಮುಂದೆ ಹೋದಂತೆಲ್ಲಾ ನಮಗೆ ಬದುಕು ಎಂದರೆ ಏನೆಂದು ಅರ್ಥವಾಗುತ್ತಾ ಹೋಗುತ್ತದೆ. ಹಾಗೆ ಬೆಳೆಯುತ್ತಾ ಬೆಳೆಯುತ್ತಾ ಬದುಕಿನ ಎಲ್ಲಾ ಅನುಭವಗಳನ್ನು ಪಡೆದು, ಬದುಕಿನ ಎಲ್ಲಾ ಹಂತಗಳನ್ನು ದಾಟಿ ವೃದ್ಧಾಪ್ಯವನ್ನು ತಲುಪಿದಾಗ ನಮಗೆ ಬದುಕು ಎಂದರೆ ಏನೆಂದು ಚೆನ್ನಾಗಿ ಅರ್ಥವಾಗಿರುತ್ತದೆ. ವೃದ್ಧಾಪ್ಯದಲ್ಲಿ ಒಂದು ಕ್ಷಣ ನಾವು ಸಾಗಿಬಂದ ಹಾದಿಯನ್ನು ಹಿಂತಿರುಗಿ ನೋಡಿದಾಗ ಅಲ್ಲಿ ನಾವು ಸಾಗಿಬಂದ ಹಾದಿಗಳು, ಆ ಹಾದಿಯಲ್ಲಿನ ನಮ್ಮ ಯಶಸ್ಸಿನ ಹೆಜ್ಜೆಗಳು, ಪ್ರತೀ ಹೆಜ್ಜೆಗಳಲ್ಲಿ ನಾವು ಅನುಭವಿಸಿದಂಥ ಸೋಲು–ಗೆಲುವುಗಳು, ಕಷ್ಟ–ನಷ್ಟಗಳು, ನೋವು–ನಲಿವುಗಳು ಎಲ್ಲವೂ ಒಂದೊಂದಾಗಿ ಕಣ್ಮುಂದೆ ಬರುತ್ತವೆ. ಅದನ್ನೆಲ್ಲಾ ನೋಡಿದಾಗ ಮನಸ್ಸಿಗೆ ವರ್ಣಿಸಲಾಗದಷ್ಟು ಸಂತೋಷ, ಹೆಮ್ಮೆ ಎಲ್ಲವೂ ಆಗುತ್ತದೆ. ಆದರೆ ಮರುಕ್ಷಣವೇ ಆ ಸಂತೋಷ, ಹೆಮ್ಮೆ ಎಲ್ಲವೂ ಮರೆಯಾಗಿ ಹೋಗುತ್ತವೆ. ಕಾರಣ ಜೀವನದುದ್ದಕ್ಕೂ ನಾವು ತಿಳಿದೋ ತಿಳಿಯದೆಯೋ ಮಾಡಿದ ಅನೇಕ ತಪ್ಪುಗಳು, ನಮ್ಮ ತಪ್ಪುಗಳಿಂದ ಇತರರ ಮನಸ್ಸಿಗಾದ ನೋವುಗಳು ಎಲ್ಲವೂ ನಮ್ಮ ಕಣ್ಮುಂದೆ ಬರುತ್ತವೆ. ಆಗ ನಮ್ಮ ಮನಸ್ಸಿನಲ್ಲಿ ಪಶ್ಚಾತ್ತಾಪದ ದುಃಖ ಉಮ್ಮಳಿಸಿ ಬರುತ್ತದೆ. ಒಂದು ಕಡೆ ನಾವು ಸಾಗಿಬಂದ ಹಾದಿಯನ್ನು, ನಮ್ಮ ಯಶಸ್ಸಿನ ಹೆಜ್ಜೆಗಳನ್ನು ನೋಡಿ ಸಂತೋಷವಾದರೂ ಇನ್ನೊಂದು ಕಡೆ ಜೀವನದಲ್ಲಿ ನಾವು ಮಾಡಿದ ತಪ್ಪುಗಳು, ನಮ್ಮ ತಪ್ಪುಗಳಿಂದ ಇತರರು ಪಟ್ಟ ಕಷ್ಟಗಳು ಕಣ್ಮುಂದೆ ಬಂದಾಗ ಮನಸ್ಸಿಗೆ ತುಂಬಾ ದುಃಖವಾಗುತ್ತದೆ. ಆದರೆ ಮತ್ತೆ ಬದುಕಿನಲ್ಲಿ ಹಿಂತಿರುಗಿ ಹೋಗಿ ಆ ತಪ್ಪುಗಳನ್ನೆಲ್ಲಾ ಸರಿಪಡಿಸಲು ಸಾಧ್ಯವೇ ಇಲ್ಲ. "ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ" ಎನ್ನುವ ಮಾತಿನಂತೆ ಜೀವನಪೂರ್ತಿ ನಾವು ಮಾಡಿದಂತಹ ತಪ್ಪುಗಳಿಗೆ ಪಶ್ಚಾತ್ತಾಪಪಡುತ್ತಾ "ತಪ್ಪು ಮಾಡುವುದು ಸಹಜ ಗುಣ, ತಿದ್ದಿ ನಡೆಯುವುದು ಮನುಜ ಗುಣ" ಎನ್ನುವ ಮಾತನ್ನು ನೆನಪಿಸಿಕೊಳ್ಳುತ್ತಾ ಬದುಕಿರುವಷ್ಟು ದಿನ ಇತರರ ದುಃಖಕ್ಕೆ ಕಾರಣವಾಗದೇ, ಆದಷ್ಟು ಇತರರ ಕಣ್ಣೀರನ್ನು ಒರೆಸುತ್ತಾ ಸಂತೋಷದಿಂದ ಬದುಕಬೇಕಷ್ಟೆ. ಏಕೆಂದರೆ ಸಾವು ಎನ್ನುವುದು ಅನಿರೀಕ್ಷಿತ...



–ಉಲ್ಲಾಸ್ ಕಜ್ಜೋಡಿ

# ಏ.13–16: ಕಣೆಮರಡ್ಕ ವಿಷ್ಣುಮೂರ್ತಿ ದೈವಸ್ಥಾನದ ಪ್ರತಿಷ್ಠಾ ಸಮಾರಂಭ





ಸುಳ್ಯ: ತಾಲೂಕಿನ ಮಂಡೆಕೋಲು ಗ್ರಾಮದ ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿದ್ದು, ಇದೇ ದೇವಸ್ಥಾನಕ್ಕೆ ಸಂಬಂಧಪಟ್ಟ ಕಣೆಮರಡ್ಕ ಶ್ರೀ ವಿಷ್ಣುಮೂರ್ತಿ ದೈವಸ್ಥಾನದಲ್ಲಿ ಎಪ್ರಿಲ್ 13 ರಿಂದ ವಿವಿದ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ದೈವದ ಪುನರ್ ಪ್ರತಿಷ್ಠಾ ಕಾರ್ಯಕ್ರಮಗಳು ನಡೆಯಲಿವೆ.

ಎಪ್ರಿಲ್ 13 ರ ಶನಿವಾರ ಸಂಜೆ 6.45 ಕ್ಕೆ ದೀಪಾರಾಧನೆ, 7 ಗಂಟೆಗೆ ಕುತ್ತಿಪೂಜೆ ನಡೆಯಲಿದ್ದು ಬಳಿಕ ಅನ್ನ ಸಂತರ್ಪಣೆ ನಡೆಯಲಿದೆ. ಎಪ್ರಿಲ್ 14 ರ ಭಾನುವಾರ ಬೆಳಿಗ್ಗೆ 10.56 ಕ್ಕೆ ಉಗ್ರಾಣ ತುಂಬಿಸುವ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30 ಕ್ಕೆ ಪೂರ್ಣ ಕುಂಭ ಸ್ವಾಗತದೊಂದಿಗೆ ತಂತ್ರಿಗಳ ಆಗಮನವಾಗಿ, ಸ್ಥಳ ಶುದ್ಧಿ, ವಾಸ್ತು ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದು ಬಳಿಕ ಅನ್ನಸಂತರ್ಪಣೆ ನಡೆಯಲಿದೆ.

ಎಪ್ರಿಲ್ 15 ರ ಸೋಮವಾರ ಪ್ರಾತಃಕಾಲ 6 ರಿಂದ ಗಣಪತಿ ಹವನ, ಕಲಶಪೂಜೆ ನಡೆಯಲಿದೆ. ಬಳಿಕ ವಿಷ್ಣುಮೂರ್ತಿ ದೈವದ ಪುನರ್ ಪ್ರತಿಷ್ಠೆ, ಗುಳಿಗ ದೈವದ ಪ್ರತಿಷ್ಠೆ ಹಾಗೂ ಕಲಶಾಭಿಷೇಕ ನಡೆಯಲಿದೆ. ನಂತರ ಮಹಾವಿಷ್ಣು ಭಜನಾ ಸಂಘ ಹಾಗೂ ಅಯ್ಯಪ್ಪ ಸ್ವಾಮಿ ಭಜನಾ ಮಂದಿರ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಬಳಿಕ ಅನ್ನಸಂತರ್ಪಣೆಯಾಗಲಿದೆ. ಸಂಜೆ 7 ಕ್ಕೆ ವಿಷ್ಣುಮೂರ್ತಿ ದೈವದ ಭಂಡಾರ ತೆಗೆದ ಬಳಿಕ ದೈವದ ತೊಡಂಜಲ್ ಜರುಗಿ, ನಂತರ ಅನ್ನ ಸಂತರ್ಪಣೆ ನಡೆಯಲಿದೆ.

ಎಪ್ರಿಲ್ 16 ರಂದು ಬೆಳಿಗ್ಗೆ 10 ಕ್ಕೆ ವಿಷ್ಣುಮೂರ್ತಿ ದೈವದ ನಡಾವಳಿ ನಡೆಯಲಿದೆ. ನಂತರ ಪ್ರಸಾದ ವಿತರಣೆಯ ಬಳಿಕ ಅನ್ನ ಸಂತರ್ಪಣೆ ನಡೆಯಲಿದೆ. ಮಧ್ಯಾಹ್ನ 2 ರ ನಂತರ ಮುಳ್ಳುಗುಳಿಗನ ಕೋಲ ನಡೆಯಲಿದೆ. ಎಪ್ರಿಲ್ 21 ರ ಭಾನುವಾರ ಇದೇ ದೈವಸ್ಥಾನದ ಮುಂಭಾಗ ಸುದರ್ಶನ ಹೋಮ ನಡೆಯಲಿದೆ.

ನಾಲ್ಕೂರಿನ ದೈವಗಳ ಭಂಡಾರ ಇರುವ ಈ ಕಣೆಮರಡ್ಕ ವಿಷ್ಣುಮೂರ್ತಿ ದೈವಸ್ಥಾನಕ್ಕೂ ಊರಿನ ಮಹಾವಿಷ್ಣು ಮೂರ್ತಿ ದೇವಸ್ಥಾನಕ್ಕೂ ಒಂದಕ್ಕೊಂದು ಸಂಬಂಧವಿದೆ. ಬ್ರಹ್ಮಕಲಶೋತ್ಸವದ ಈ ಶುಭ ಸಂದರ್ಭದಲ್ಲಿ ಸುಮಾರು 30 ಲಕ್ಷ ರೂ. ವೆಚ್ಚದಲ್ಲಿ ಈ ದೈವಸ್ಥಾನದ ಚಾವಡಿ ನಿರ್ಮಾಣವಾಗಿದೆ. ಅತ್ತಿತ್ತ ನಾಲ್ಕೂ ಕಡೆ ನೀರಿಗೆ ಕೊರತೆ ಉಂಟಾಗಿದ್ದರೂ ಈ ದೈವಸ್ಥಾನದ ಎದುರು ಭಾಗದಲ್ಲೇ ಕೊರೆದ ಬಾವಿಯಲ್ಲಿ ಉತ್ತಮ ನೀರಿನ ಸೆಳೆ ದೊರಕಿರುವುದು ದೈವದ ಕಾರ್ಣಿಕ ಎಂದೇ ಇದೀಗ ಬಣ್ಣಿಸಲಾಗುತ್ತಿದೆ.

# ರೋಟರಿ ವಿದ್ಯಾ ಸಂಸ್ಥೆಯಲ್ಲಿ ನಿವೃತ್ತ ಶಿಕ್ಷಕಿ ಶ್ರೀಮತಿ ಉಷಾ ಕೆ. ಯವರಿಗೆ ಬೀಳ್ಕೊಡುಗೆ ಹಾಗೂ ಸನ್ಮಾನ





ರೋಟರಿ ವಿದ್ಯಾ ಸಂಸ್ಥೆಯಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ, ಸೇವೆಯಿಂದ ನಿವೃತ್ತಿಗೊಂಡ ಹಿರಿಯ ಶಿಕ್ಷಕಿ ಶ್ರೀಮತಿ ಉಷಾ.ಕೆ ಯವರಿಗೆ ಬೀಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭ ಎಪ್ರಿಲ್ 8 ರಂದು ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ರೋಟರಿ ಸುಳ್ಯದ ಅಧ್ಯಕ್ಷರಾದ ರೊ.ಆನಂದ ಖಂಡಿಗ ಶಿಕ್ಷಕಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ, ನಿವೃತ್ತಿ ಜೀವನಕ್ಕೆ ಶುಭ ಹಾರೈಸಿದರು.ವಿದ್ಯಾಸಂಸ್ಥೆಯ ಸಂಚಾಲಕರಾದ ರೊ.ಗಿರಿಜಾಶಂಕರ್ ತುದಿಯಡ್ಕ, ಆಡಳಿತ ಮಂಡಳಿಯ ಸದಸ್ಯರಾದ ರೊ.ಸವಣೂರು ಸೀತಾರಾಮ ರೈ., ರೊ.ದಯಾನಂದ ಆಳ್ವ, ರೊ.ಪ್ರಭಾಕರ ನಾಯರ್, ರೊ. ಮಹಾಲಕ್ಷ್ಮೀ ಕೊರಂಬಡ್ಕ ಶುಭ ಹಾರೈಸಿದರು. ಸಹ ಶಿಕ್ಷಕರಾದ ಶ್ರೀಹರಿ ಪೈಂದೋಡಿ, ಶ್ರೀಮತಿ ಜಯಶ್ರೀ ಕೆ., ಶ್ರೀಮತಿ ಚಂದ್ರಕಲಾ ಡಿ. ಶ್ರೀಮತಿ ನಳಿನಾಕ್ಷಿ.ಕಲ್ಮಡ್ಕ ವಿದ್ಯಾರ್ಥಿಗಳಾದ ಪ್ರಣಮ್ಯ ಎನ್ ಆಳ್ವ, ಶೃಂಗಿ, ಪೃಥ್ವಿರಾಜ್, ಕ್ಷಿತೀಶ ರಾಮ, ಹಂಸಿಕಾ,ನಿಶ್ಲಿಕಾ, ವರ್ಷಿಣಿ, ನಿರೀಕ್ಷಾ ಸುಳಾಯ, ಯಶ್ವಿನೀ , ಯಶಸ್ವಿ ಎಸ್.ರೈ, ಹಿಮಾನಿ, ಶ್ರೀ ದುರ್ಗಾ, ಫಾತಿಮಾತ್ ಶೈಮಾ, ಯಶಸ್ವಿ ಕೆ.ಜಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.ಬಳಿಕ ಆಡಳಿತ ಮಂಡಳಿ, ಪದವಿ ಪೂರ್ವ ಕಾಲೇಜು, ಪ್ರಾಥಮಿಕ ವಿಭಾಗ, ಶಾಲಾ ಬಸ್ಸಿನ ಚಾಲಕ ಮತ್ತು ನಿರ್ವಾಹಕರಿಂದ , ಪ್ರೌಢಶಾಲಾ ಸಿಬ್ಬಂದಿ ವರ್ಗದವ–ರಿಂದ ನಿವೃತ್ತ ಶಿಕ್ಷಕಿಯವರಿಗೆ ಸನ್ಮಾನ ಸಮಾರಂಭ ನಡೆಯಿತು. ಸನ್ಮಾನ ಸ್ವೀಕರಿಸಿದ ಶಿಕ್ಷಕಿ ಶ್ರೀಮತಿ ಉಷಾ ಮೇಡಂ ತಮ್ಮ ಮೂವತ್ತು ವರ್ಷಗಳ ಸುದೀರ್ಘ ಸೇವೆಯ ಅನುಭವ ಹಂಚಿಕೊಂಡು ಭಾವುಕರಾದರು. ಪೂರ್ವ ಸಂಚಾಲಕರಾದ ರೊ.ಬಾಪು ಸಾಹೇಬ್, ನಿವೃತ್ತ ಶಿಕ್ಷಕಿಯ ಪತಿ ಸಹಕಾರಿ ಬ್ಯಾಂಕ್ ನ ನಿವೃತ್ತ ಕಾರ್ಯ ನಿರ್ವಹಣಾ ಅಧಿಕಾರಿ ವಾಸುದೇವ ಹಾಗೂ ಪುತ್ರಿಯರಾದ ಶ್ರೀಮತಿ ಪ್ರೇಕ್ಷಾ, ಹಾಗೂ ಪ್ರತ್ಯಕ್ಷ ಮೊಗ್ರ ಉಪಸ್ಥಿತರಿದ್ದರು. ಪ್ರೌಢಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ವೀಣಾ ಶೇಡಿಕಜೆ ಸ್ವಾಗತಿಸಿ, ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಶ್ರೀಮತಿ ಹರಿಣಾಕ್ಷಿ.ಕೆ.ಎಸ್. ವಂದನಾರ್ಪಣೆ ಸಲ್ಲಿಸಿದರು.

# ಆಯಿಷ ಅಲ್ ಝಿನಾ ಗೆ ವಿಜ್ಞಾನ ವಿಭಾಗದಲ್ಲಿ ಡಿಸ್ಟಿಂಕ್ಷನ್



ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗಲ್ಲಿ ಮಂಗಳೂರಿನ ಪ್ರೆಸ್ಟೀಜ್ ಕಾಲೇಜಿನ

ವಿದ್ಯಾರ್ಥಿನಿ ತೆಕ್ಕಿಲ್ ಕುಟುಂಬದ ಸದಸ್ಯೆ ಆಯಿಷ ಅಲ್ ಝೀನಾ ರವರು 600ರಲ್ಲಿ 584 ಅಂಕಗಳೊಂದಿಗೆ ಶೇಕಡ 97.5 ಪರ್ಸೆಂಟ್ ಮಾರ್ಕ್‌ನೊಂದಿಗೆ ಡಿಸ್ಟಿಂಕ್ಷನ್ ಪಡೆದಿದ್ದು ಬಯೋಲಜಿಯಲ್ಲಿ 100 ಕ್ಕೆ 100 ಅಂಕ ಪಡೆದಿರುತ್ತಾರೆ. ಇವರು ಪ್ರತಿಷ್ಠಿತ ತೆಕ್ಕಿಲ್ ಮನೆತನದ ಆಯಿಷಾ ಗೂನಡ್ಕ ತೆಕ್ಕಿಲ್ ಮತ್ತು ಮೊಯಿದೀನ್ ಕುಂಞಿ ಅಬ್ದುಲ್ಲ ಚೆಪ್ಪಾರ್ ರವರ ಮೊಮ್ಮಗಳು ಮಂಗಳೂರಿನಲ್ಲಿ ವ್ಯಾಪಾರಿಯಾಗಿರುವ ಕುಂಞಿ ಅಬ್ದುಲ್ಲ ಹಾಗೂ ಫಾತಿಮತ್ ರಝೀಯ ಚೆಪ್ಪಾರ್ ರವರ ಪುತ್ರಿ .

# ಆಳ್ವಾಸ್ ವಿದ್ಯಾರ್ಥಿನಿ ದೀಪ್ತಿ ಬಿ.ಎಸ್. ಗೆ ಡಿಸ್ಟಿಂಕ್ಷನ್



ಆಳ್ವಾಸ್ ಮೂಡಬಿದ್ರೆ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ದೀಪ್ತಿ ಬಿ ಎಸ್ ಪೈಕ ಬೊಮ್ಮದೇರೆ 557 ಅಂಕ ಪಡೆದು ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆಯಾಗಿದ್ದಾರೆ. ಇವರು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸೋಮಶೇಖರ ಪೈಕ ಹಾಗೂ ಅರಂತೋಡು ಹಾಲು ಉತ್ಪಾದಕರ ಸಹಕಾರಿ ಸಂಘದ ಕಾರ್ಯದರ್ಶಿ ವಿಮಲಾ ದಂಪತಿಗಳ ಪುತ್ರಿ.

# ಕುಮಾರಧಾರ ನದಿಯಲ್ಲಿ ಸತ್ತ ಮೊಸಳೆ– ಅರಣ್ಯ ಇಲಾಖೆಯವರು ಸ್ಥಳಕ್ಕೆ ಆಗಮನ



ಪಂಜ ಸಮೀಪದ ಕೋಡಿಂಬಾಳ ಗ್ರಾಮದ ಕುಮಾರಧಾರ ನದಿಯ ಪುಳಿಕುಕ್ಕು ಸೇತುವೆ ಅಡಿಯಲ್ಲಿ ಮೊಸಳೆಯೊಂದು ಸತ್ತು ಬಿದ್ದಿರುವ ಘಟನೆ ಏ.12 ರಂದು ವರದಿಯಾಗಿದೆ. ಮೊಸಳೆ ಸಾವಿಗೆ ಕಾರಣ ತಿಳಿದು ಬಂದಿಲ್ಲ. ಮೊಸಳೆಗಳು ಕಾದಾಡಿ ಕೆಲವೊಮ್ಮೆ ಸಾಯುತ್ತದೆ. ಅಥವಾ ಕಲುಷಿತ ನೀರು, ಬೇರೆ ಯಾವುದೇ ಕಾರಣ ತನಿಖೆ ಬಳಿಕ ತಿಳಿಯಲಿದೆ. ಪಂಜ ಅರಣ್ಯ ಇಲಾಖೆಯವರು ಸ್ಥಳಕ್ಕೆ ಬಂದು ಹೊಳೆಯಿಂದ ಮೊಸಳೆಯನ್ನು ತೆರವು ಗೊಳಿಲಾಗಿದೆ.

# ಪಿ.ಯು.ಸಿ ಫಲಿತಾಂಶ : ಬೆಳ್ಳಾರೆಯ ಹರ್ಷಿತಾ.ಟಿ ಡಿಸ್ಟಿಂಕ್ಷನ್



ಈ ಸಲದ ಪಿ.ಯು.ಸಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಪುತ್ತೂರು ನೆಲ್ಲಿಕಟ್ಟೆ ಅಂಬಿಕಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಬೆಳ್ಳಾರೆ ಮಾಸ್ತಿಕಟ್ಟೆಯ ಹರ್ಷಿತಾ.ಟಿ 545 ಅಂಕಗಳನ್ನು ಗಳಿಸುವ ಮೂಲಕ ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆಗೊಂಡಿದ್ದಾರೆ. ಇವರು ಬೆಳ್ಳಾರೆ ಮಾಸ್ತಿಕಟ್ಟೆಯ ಸುಬ್ರಹ್ಮಣ್ಯೇಶ್ವರ ಗ್ಯಾರೇಜ್ ಮಾಲಕ ಶ್ರೀ ತಿರುಮಲೇಶ್ವರ ಹಾಗೂ ಬೆಳ್ಳಾರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶ್ರೀಮತಿ ಬೇಬಿ. ಕೆ.ಸಿ ರವರ ಪುತ್ರಿ.

# ಸುಳ್ಯ : ಬಿಜೆಪಿ ಕಛೇರಿಯಲ್ಲಿ ಎಸ್. ಸಿ. ಮೋರ್ಚಾದ ಪ್ರಮುಖರ ಸಭೆ



2024 ರ ಲೋಕಸಭಾ ಚುನಾವಣೆಯ ಪ್ರಯುಕ್ತ ಸಂಘಟನಾತ್ಮಕವಾಗಿ ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಪಕ್ಷದ ಬಲವರ್ಧನೆಗೆ ಕಾರ್ಯತಂತ್ರ ರೂಪಿಸುವ ಸಲುವಾಗಿ ಸುಳ್ಯ ವಿಧಾನಸಭಾ ಕ್ಷೇತ್ರದ ಎಸ್ ಸಿ ಮೋರ್ಚಾದ ಪ್ರಮುಖರ ಸಭೆ ಬಿಜೆಪಿ ಕಚೇರಿಯಲ್ಲಿ ನಡೆಯಿತು. ಸಭೆಯಲ್ಲಿ ಏ. 6ರಂದು ಬಿಜೆಪಿ ಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ಮತ್ತು ಏ. 14ರಂದು ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಬೂತ್ ಮಟ್ಟದಲ್ಲಿ ಆಚರಿಸಲು ತೀರ್ಮಾನಿಸಲಾಯಿತು. ಏಪ್ರಿಲ್ 8ರಂದು ತಾಲೂಕು ಮಹಿಳಾ ಸಮಾವೇಶದಲ್ಲಿ ಕೂಡ ಮಹಿಳೆಯರು ಹೆಚ್ಚು ಭಾಗವಹಿಸಿಕೊಳ್ಳಲು ಸಂಪರ್ಕಗೊಳಿಸುವ ನಿಟ್ಟಿನಲ್ಲಿ ಸಭೆಯಲ್ಲಿ ತೀರ್ಮಾನಗೊಳಿಸಲಾಯಿತು.

ಸುಳ್ಯ ತಾಲೂಕು ಹಾಗೂ ಕಡಬ ತಾಲೂಕಿನ ಬಿಜೆಪಿ ಎಸ್ಸಿ ಮೋರ್ಚ ಕಡೆಯಿಂದ ಪಂಚಾಯತ್ ಸದಸ್ಯರು, ಸಹಕಾರಿ ಸಂಘದ ಸದಸ್ಯರು, ದೇವಸ್ಥಾನ ವ್ಯವಸ್ಥಾಪನ ಸಮಿತಿಯಲ್ಲಿ ಜವಾಬ್ದಾರಿ ಹೊಂದಿರುವ ಸದಸ್ಯರು ಕಾಲೋನಿಯ ಎಲ್ಲ ಪ್ರಮುಖರುಗಳ ಸಭೆಯನ್ನು ಏ.15ರಂದು ನಡೆಸುವ ಬಗ್ಗೆ ತೀರ್ಮಾನ ಗೊಳಿಸಲಾಯಿತು. ಸಭಾ ಅಧ್ಯಕ್ಷತೆಯನ್ನು ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷರದ ವೆಂಕಟ್ ವಳಲಂಬೆ ವಹಿಸಿದ್ದರು.

ಸುಳ್ಯ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಭಾರಿ ರವೀಂದ್ರ ರೈ ಉಳಿದೊಟ್ಟು, ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ, ಮನೋವಳಿಕೆ, ಎಸ್ಸಿ ಮೋರ್ಚಾದ ಅಧ್ಯಕ್ಷ ವಿಜಯ ಅಲಡ್ಕ, ಪ್ರಧಾನ ಕಾರ್ಯದರ್ಶಿಗಳಾದ ಜಿ ಜಗನ್ನಾಥ ಜಯನಗರ, ಕೊರಗಪ್ಪ ಎ ರಟ್ಟಾಡಿ ಉಪಸ್ಥಿತರಿದ್ದರು. ಸಭೆಗೆ ಎಸ್ಸಿ ಮೋರ್ಚಾದ ಪ್ರಮುಖರಾದ ಕೃಷ್ಣ ಸುಳ್ಳಿ, ದಿನೇಶ್ ಪೆರಾಜೆ, ಜೀವನ್ ಪೇರಾಲು, ಚಂದ್ರ ರೆಂಜಾಳ, ಶುಶಾಂತ್ ವಿನೋದ್ ಆಲಡ್ಕ ಸಂದೀಪ್ ಕುತ್ತಮೊಟ್ಟೆ ಉಮೇಶ್ ಮುಪ್ಪೇರ್ಯ, ಸಂಜಿತ್ ಹೈದಂಗೂರು, ಭಾರತಿ ನಾಲ್ಕೂರು, ಸಂಜಯ್ ಪೈಚಾರ್ ಚನಿಯ ಕಲ್ತಡ್ಕ, ಜಿಲ್ಲಾ ಕಾರ್ಯದರ್ಶಿ ಶಂಕರ್ ಪೆರಾಜೆ ಭಾಗವಹಿಸಿದ್ದರು. ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿ ಜಗನ್ನಾಥ್ ಜಯನಗರ ಸ್ವಾಗತಿಸಿ ವಂದಿಸಿದರು.

# ಪಂಜ : ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ಗೌರವ ಸಲಹೆಗಾರರಾಗಿ ನೇಮಕಗೊಂಡವರಿಗೆ ಗೌರವಾರ್ಪಣೆ



ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನ ಸಮಿತಿಯ ಗೌರವ ಸಲಹೆಗಾರರಾಗಿ ನೇಮಕಗೊಂಡ ಮಹೇಶ್ ಕುಮಾರ್ ಕರಿಕ್ಕಳ, ಆನಂದ ಗೌಡ ಕಂಬಳ ಹಾಗೂ ಪರಮೇಶ್ವರ ಬಿಳಿಮಲೆ ಯವರಿಗೆ ಶ್ರೀ ದೇಗುಲದ ವತಿಯಿಂದ ಗೌರವಾರ್ಪಣೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಡಾ. ದೇವಿಪ್ರಸಾದ್ ಕಾನತ್ತೂರ್, ಪ್ರಧಾನ ಅರ್ಚಕರಾದ ರಾಮಚಂದ್ರ ಬಟ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಧರ್ಮಪಾಲ ಗೌಡ ಮರಕ್ಕಡ ಕಾಚಿಲ, ಸಂತೋಷ್ ಕುಮಾರ್ ರೈ ಬಳ್ಪ, ಧರ್ಮಣ್ಣ ನಾಯ್ಕ ಗರಡಿ, ಸತ್ಯನಾರಾಯಣ ಭಟ್ ಕಾಯಂಬಾಡಿ, ಮಾಯಿಲಪ್ಪ ಗೌಡ ಪಟ್ಟೆ, ಎಣ್ಮೂರು, ಶ್ರೀಮತಿ ಪವಿತ್ರ ಮಲ್ಲೆಟ್ಟಿ, ಶ್ರೀಮತಿ ಮಾಲಿನಿ ಕುದ್ವ, ಅರ್ಚಕರಾದ ನರೇಶ್ ಕೃಷ್ಣ ಉಪಸ್ಥಿತರಿದ್ದರು. ಪಂಜ ಶ್ರೀ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ದಿನ ನಿತ್ಯ ಸೇವೆಗಳ ಹಾಗೂ ಕಲ್ಯಾಣ ಮಂಟಪ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8431981889 ಯನ್ನು ನೀಡಲಾಗಿದೆ. ದಿನದ 24ಗಂಟೆ ಸೇವೆ ನೀಡಲು ಕರೆ ಮಾಡಿ ಮಾಹಿತಿ ಪಡಕೊಳ್ಳಬಹುದು ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಡಾ. ದೇವಿ ಪ್ರಸಾದ್ ಕಾನತ್ತೂರು ತಿಳಿಸಿದ್ದಾರೆ.

# ಬಿಜೆಪಿ ಹಾಗೂ ಜನತಾದಳ ನಾಯಕರ ಜಂಟಿ ಸಭೆ, ಸುಳ್ಯದಲ್ಲಿ 70 ಸಾವಿರ ಲೀಡ್ ಗುರಿ – ಭಾಗೀರಥಿ ಮುರುಳ್ಯ



ಸುಳ್ಯ ಬಿಜೆಪಿ ಮಂಡಲ ಕಛೇರಿಯಲ್ಲಿ ಎನ್ ಡಿ ಎ ಒಕ್ಕೂಟ ಮೈತ್ರಿ ಪಕ್ಷಗಳ ನಾಯಕರ ಸಭೆಯು ಸುಳ್ಯದ ಪಕ್ಷದ ಕಛೇರಿಯಲ್ಲಿ ನಡೆಯಿತು.

ಭಾಜಪಾ ಸ್ಥಾಪನಾ ದಿನಾಚರಣೆಯಾದ ಏ.06ರಂದು ಭಾರತ ಮಾತೆಗೆ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ, ದಿನದಯಾಳ್ ಉಪಾಧ್ಯಾಯರ ಭಾವಚಿತ್ರಗಳಿಗೆ ಪುಷ್ಪಾರ್ಚನೆಯನ್ನು ಮಾಡಿ ಸಭೆಯನ್ನು ಆರಂಭಿಸಲಾಯಿತು.

ಸಭೆಯಲ್ಲಿ ಲೋಕಸಭಾ ಚುನಾವಣಾ ಕೆಲಸಗಳಿಗೆ ಯಾವ ರೀತಿಯಲ್ಲಿ ವೇಗವನ್ನು ಕೊಡಬೇಕು, ಒಟ್ಟಾಗಿ ಜೊತೆಯಲ್ಲಿ ಸೇರಿಕೊಂಡು ಚುನಾವಣೆಯನ್ನು ಎದು–ರಿಸುವುದರ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮತನಾಡುತ್ತಾ ಈ ಹಿಂದೆ ಬಿಜೆಪಿ 60 ಸಾವಿರ ಮತಗಳ ಲೀಡ್ ಪಡೆಯುತ್ತಿದ್ದೆವು ಈಗ ನಾವು ಮೈತ್ರಿಯ ಮೂಲಕ 70 ಸಾವಿರ ಲೀಡ್ ಪಡೆಯಬೇಕು ಎಂದು ಹೇಳಿದರು.

ಈ ಸಭೆಯಲ್ಲಿ ಮಂಡಲ ಅಧ್ಯಕ್ಷರಾದ ವೆಂಕಟ ವಳಲಂಬೆ, ಜೆಡಿಎಸ್ ಅಧ್ಯಕ್ಷರಾದ ಸುಕುಮಾರ್ ಕೊಡ್ತುಗುಳಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್ ಕಂದಡ್ಕ, ಜಿಲ್ಲಾ ಉಪಾಧ್ಯಕ್ಷ ರಾಕೇಶ ರೈ ಕೆಡೆಂಜಿ, ಹಿರಿಯರಾದ ಎಸ್, ಎನ್ ಮನ್ಮಥ, ಮತ್ತು ಜನತದಳದ ಪ್ರಮುಖರಾದ ರಾಜ್ಯ ವಕ್ತಾರರು ಎಂ ಬಿ ಸದಾಶಿವ, ಕಡಬ ತಾಲ್ಲೂಕು ಅಧ್ಯಕ್ಷರಾದ ಸೈಯ್ಯದ್ ಮಿರಾಸಾಹೇಬ್ ಹಾಗೂ ಭಾಜಪ ಮತ್ತು ಜನತದಳದ ಪ್ರಮುಖ ಕಾರ್ಯಕರ್ತರು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್‌ನ ವಿವಿಧ ಸಮಿತಿಗೆ ಉಸ್ತುವಾರಿ ನೇಮಕ



ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾನೂನು ಘಟಕದ ಉಸ್ತುವಾರಿಯಾಗಿ ಜಯಪ್ರಕಾಶ್ ರೈ ರವರನ್ನು ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಉಸ್ತುವಾರಿಯಾಗಿ ಕಿರಣ್ ಬುಡ್ಲೆಗುತ್ತು ರವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಹರೀಶ್ ಕುಮಾರ್ ರವರು ಆಯ್ಕೆ ಮಾಡಿರುತ್ತಾರೆ.

# ಪಂಜ ದೇವಸ್ಥಾನಕ್ಕೆ ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಬಾಲಕೃಷ್ಣ ಶಾಸ್ತ್ರೀ ಭೇಟಿ



ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ದ ಹಿರಿಯ ನ್ಯಾಯವಾದಿ ಗಳಾದ ಬಾಲಕೃಷ್ಣ ಶಾಸ್ತ್ರಿ ಗುತ್ತಿಗಾರು ಇಂದು ಶ್ರೀ ಪರಿವಾರ ಪಂಚಿಂಗೇಶ್ವರ ದೇಗುಲಕ್ಕೆ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು ದೇಗುಲದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಾದ ದಾ. ದೇವಿ ಪ್ರಸಾದ್ ಕಾನತ್ತೂರು, ವ್ಯವಸ್ಥಾ ಪನ ಸಮಿತಿ ಸದಸ್ಯ ರಾದ ಕಾಯಂಬಾಡಿ ಸತ್ಯನಾರಾಯಣ ಭಟ್, ಸಂತೋಷ್ ಕುಮಾರ್ ರೈ ಬಳ್ಪ ವ್ಯವಸ್ಥಾಪನ ಸಮಿತಿ ಮಾಜಿ ಸದಸ್ಯರಾದ ರಜಿತ್ ಭಟ್ ಪಂಜ ಬೀಡು, ಅರ್ಚಕರಾದ ನರೇಶ್ ಕೃಷ್ಣ ಉಪಸ್ಥಿತರಿದ್ದರು.

# ಹರಿಹರ ಪಲ್ಲತ್ತಡ್ಕದಲ್ಲಿ ಪರಿಹಾರಿಣಿ ಅಕ್ಯುಪ್ರೆಶರ್ ಚಿಕಿತ್ಸಾ ಶಿಬಿರ ಉದ್ಘಾಟನೆ



ಕೊಲ್ಲಮೊಗ್ರು ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಏಳು ದಿನಗಳ ಪರಿಹಾರಿಣಿ ಅಕ್ಯುಪ್ರೆಶರ್ ಚಿಕಿತ್ಸಾ ಶಿಬಿರವನ್ನು ಸಹಕಾರಿ ಸಂಘದ ನಿರ್ದೇಶಕರಾದ ವಿನುಪ್ ಮಲ್ಲಾರ ರವರು ಉದ್ಘಾಟಿಸಿದರು. ವೇದಿಕೆಯಲ್ಲಿ ಸಹಕಾರಿ ಸಂಘದ ಕಾರ್ಯನಿರ್ವಾಹಣಾಧಿಕಾರಿ ಅನಂತರಾಮ ಮಣಿಯಾನ ಮನೆ, ನಿರ್ದೇಶಕರುಗಳಾದ ವಿಜಯ.ಕೆ. ಎಸ್ ಮತ್ತು ವಿಜಯ.ಕೆ.ಜೆ.ಯವರು ಹಾಗೂ ಆಯೋಜಕರಾದ ಲೋಕೇಶ ಪೀರನಮನೆ, ಚಿಕಿತ್ಸಕರಾದ ಚಂದನ್ ಶಿವಮೊಗ್ಗ ಮತ್ತು ಸಹಕಾರಿ ಸಂಘದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಲೋಕೇಶ ಪೀರನಮನೆಯವರು ಶಿಬಿರದ ಸಮಗ್ರ ಮಾಹಿತಿ ನೀಡಿದರು. ಅನಂತರಾಮ ಮಣಿಯಾನರವರು ಎಲ್ಲರನ್ನೂ ಸ್ವಾಗತಿಸಿ ಸಾರ್ವಜನಿಕರು ಅಕ್ಯುಪ್ರೆಶರ್ ಚಿಕಿತ್ಸೆಯ ಉಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದರು. ಏಪ್ರಿಲ್ 10 ತನಕ ಚಿಕಿತ್ಸಾ ಶಿಬಿರ ನಡೆಯಿತು.

# ಬ್ರಿಜೇಶ್ ಚೌಟರಿಂದ ಕೆದಂಬಾಡಿ ರಾಮಯ್ಯ ಗೌಡರ ಪ್ರತಿಮೆಗೆ ಪುಷ್ಪ ನಮನ



ಮಂಗಳೂರು ಬಾವುಟಗುಡ್ಡೆ ಬಳಿಯಿರುವ ಕೆದಂಬಾಡಿ ರಾಮಯ್ಯ ಗೌಡರ ಪ್ರತಿಮೆಗೆ ಬಿಜೆಪಿ ಅಭ್ಯರ್ಥಿ ಬ್ರಿಜೇಶ್ ಚೌಟ ರವರು ಏ.09ರಂದು ಪುಷ್ಪ ನಮನ ಸಲ್ಲಿಸಿದರು. 1837 ರಲ್ಲಿ ಬ್ರಿಟಿಷರ ವಿರುದ್ಧ ಸಮರ ಸಾರಿದ ರಾಮಯ್ಯ ಗೌಡರ ಬಲಿದಾನ ನಮಗೆಲ್ಲ ಆದರ್ಶವೆಂದು ಬ್ರಿಜೇಶ್ ಚೌಟ ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ರಾದ ವೇದವ್ಯಾಸ ಕಾಮತ್, ಅಶ್ವಥ್ ನಾರಾಯಣ್ ಗೌಡ, ಯತೀಶ್ ಅರ್ವರ್,ಆಶಾತಿಮ್ಮಪ್ಪ ಗೌಡ,ಸತೀಶ್ ಕುಂಪಲ,ಶ್ರೀಕಾಂತ್ ಮಾವಿನಕಟ್ಟೆ,ಭಾಸ್ಕರ ದೇವಸ್ಯ, ರಕ್ಷಿತ್ ಪುತ್ತಿಲ,ಸುಧೀರ್ ಶೆಟ್ಟಿ,ಪ್ರೇಮಾನಂದ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

# ಎಲಿಮಲೆ : ದುಶ್ಚಟಗಳಿಂದ ಆರೋಗ್ಯದ ಮೇಲಿನ ದುಷ್ಪರಿಣಾಮಗಳ ಕುರಿತು ಮಾದರಿ ಪ್ರದರ್ಶನ



ಆಯುಷ್ಮಾನ್ ಆರೋಗ್ಯ ಮಂದಿರ ಎಲಿಮಲೆ ಪ್ರಾ.ಹಿ.ಪ್ರಾ.ಶಾಲೆ ಇದರ ಸಂಯುಕ್ತ ಆಶ್ರಯದಲ್ಲಿ ಏ.05 ರಂದು ಆರೋಗ್ಯಕರ ಜೀವನ, ಧೂಮಪಾನ ಮತ್ತು ಮದ್ಯಪಾನದಿಂದ ಆಗುವ ದುಷ್ಪರಿಣಾಮಗಳು, ಸಮತೋಲನ ಆಹಾರ ಆರೋಗ್ಯ ಮಾದರಿಗಳನ್ನು ಪ್ರದರ್ಶಿಸಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದಂತಹ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಅತಿಥಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸಂಧ್ಯಾ, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಶ್ರೀಧರ್ ಗೌಡ. ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಜಯಾನಂದ ಪಟ್ಟೆ, ತೀರ್ಪುಗಾರರಾದ ಶ್ರೀಮತಿ ಹರಿಣಾಕ್ಷಿ, ಹಾಗೂ ದಯಾನಂದ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತ–ರಿದ್ದರು. ಕಾರ್ಯಕ್ರಮವನ್ನು ಕುಮಾರಿ. ಮೋನಿಷಾ ಜಿ ಎಸ್ ನಿರೂಪಿಸಿದರು.

ವರದಿ, ಕಥೆ, ಜಾಹೀರಾತು,
ಕವನ
ಲೇಖನಗಳನ್ನು ಕಳುಹಿಸಿಕೊಡಿ
WWW.amarasuddi@gmail.com

# ಬಿ.ಜೆ.ಪಿ ಮಹಿಳಾ ಮೋರ್ಚಾ ಸುಳ್ಯ ಮಂಡಲ ವತಿಯಿಂದ ನಾರಿಶಕ್ತಿ ಸಮಾವೇಶ



ಏ.8ರಂದು ಬಿ.ಜೆ.ಪಿ ಮಹಿಳಾ ಮೋರ್ಚಾ ಸುಳ್ಯ ಮಂಡಲದ ವತಿಯಿಂದ ನಾರಿಶಕ್ತಿ ಸಮಾವೇಶ ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ದೀನ ದಯಾಳು ರೈತ ಸಭಾಭವನದಲ್ಲಿ ನಡೆಯಿತ್ತಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸುಳ್ಯ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಭಾಗೀರಥಿ ಮುರುಳ್ಯ ನೆರವೇರಿಸಿ ಶುಭಾ ಹಾರೈಸಿದರು. ಕಾರ್ಯಕ್ರಮದ ಸಭಾಂಗಣದಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡರು.

# ಜರ್ಮನಿಯ ಬರ್ಲಿನ್ ನಲ್ಲಿ ನಡೆಯುವ ವಿಕಿಮೀಡಿಯ ಸಮಿತ್ 2024ಕ್ಕೆ ಆಯ್ಕೆಯಾದ ಭರತೇಶ್ ಅಲಸಂಡೆಮಜಲು



ಜರ್ಮನಿಯ ಬರ್ಲಿನ್‌ನಲ್ಲಿ ಏ.19 ರಿಂದ 22 ರವರೆಗೆ ನಡೆಯಲಿರುವ ವಿಕಿಮೀಡಿಯ ಸಮಿತ್ 2024ಕ್ಕೆ ಅರೆಬಾಸೆ ಅಕಾಡೆಮಿ ಮಾಜಿ ಸದಸ್ಯ ಭರತೇಶ್ ಅಲಸಂಡೆಮಜಲು ಆಯ್ಕೆಯಾಗಿದ್ದಾರೆ. ಮಂಗಳೂರಿನ ಕರಾವಳಿ ವಿಕಿಮೀಡಿಯನ್ಸ್ ಯೂಸರ್ ಗ್ರೂಪಿನ ಸಕ್ರೀಯ ಸದಸ್ಯರಾದ ಇವರು ತುಳು ಮತ್ತು ಕನ್ನಡ ಭಾಷೆಯ ರಾಯಭಾರಿಯಾಗಿ ಈ ಸಮ್ಮಿಳನವನ್ನು ಪ್ರತಿನಿಧಿಸಲಿದ್ದಾರೆ. ಈ ವಿಕಿಮೀಡಿಯನ್ ಸಮಿತ್‌ನಲ್ಲಿ 100ಕ್ಕಿಂತ ಹೆಚ್ಚು ದೇಶಗಳ 150ಕ್ಕಿಂತ ಹೆಚ್ಚು ಬಹುಭಾಷಿಕರೊಂದಿಗೆ ಭಾಗವಹಿಸಿ ವಿಕಿಮೂಮೆಂಟ್ 2030 ಕಾರ್ಯರೂಪ, ಪ್ರಾದೇಶಿಕ ಗುಂಪುಗಳ ಅವಲೋಕನ, ಭಾಷೆಗಳ ಸವಾಲುಗಳ ಬಗೆಗಿನ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ.

ಇವರು ಪುತ್ತೂರು ತಾಲೂಕಿನ ಪೆರ್ಲಂಪಾಡಿಯ ಅಲಸಂಡೆಮಜಲು ಮನೆ ಬೋಜಪ್ಪ ಗೌಡ ಎ ಹಾಗೂ ಗಿರಿಜಾ ಎ ಬಿ. ದಂಪತಿಗಳ ಮಗ. ಪ್ರಸ್ತುತ ಬ್ಯಾಂಕ್ ಆಫ್ ಬರೋಡದ ಉದ್ಯೋಗಿಯಾಗಿದ್ದು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯರು. ಇತ್ತೀಚೇಗೆ ವಿಕಿಮೀಡಿಯ ಫೌಂಡೇಶನ್‌ನ ಸಹಯೋಗದಲ್ಲಿ ಇವರ ನಿರ್ಮಾಪಕತ್ವದಲ್ಲಿ ತಯಾರಾದ ತುಳುವಿನ ಮೊದಲ ಸಂಶೋಧನಾ ಸಾಕ್ಷ್ಯಚಿತ್ರ ಪುರ್ಸಕಟ್ಟುನ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಆಯ್ಕೆಯಾಗಿತ್ತು. ಇವರು ತುಳು, ಕನ್ನಡ ಬರಹಗಾರರಾಗಿದ್ದಾರೆ.

# ಕೆವಿಜಿ ಅಮರಜ್ಯೋತಿ ಪದವಿ ಪೂರ್ವ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ



ದ್ವಿತೀಯ ಪಿಯು ಫಲಿತಾಂಶ ಪ್ರಕಟಗೊಂಡಿದ್ದು ಕೆವಿಜಿ ಅಮರಜ್ಯೋತಿ ಪದವಿ ಪೂರ್ವ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ ಲಭಿಸಿದ್ದು, ಒಟ್ಟು 129 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 78 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ 51 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಬೃಂದಾ ಸುರೇಶ್ 589 ಅಂಕ ಪಡೆದು ರಾಜ್ಯಕ್ಕೆ 10ನೇ ರ್‍ಯಾಂಕ್ ಹಾಗೂ ಪ್ರಥಮ್ ಶೇಖರ್ 588 ಅಂಕ ಪಡೆದು ರಾಜ್ಯಕ್ಕೆ 11ನೇ ರ್‍ಯಾಂಕ್ ಪಡೆದು ವಿಜ್ಞಾನ ವಿಭಾಗದಲ್ಲಿ ದಾಖಲೆ ನಿರ್ಮಿಸಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ಸಂಜನಾ ರಾವ್ ಎಚ್ 591 ಅಂಕ ಪಡೆದು ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದು ವಾಣಿಜ್ಯ ವಿಭಾಗದಲ್ಲಿ ದಾಖಲೆ ನಿರ್ಮಿಸಿರುತ್ತಾರೆ. ರೌದ ಅಶ್ರಫ್ 581 ಅಂಕ ಗಳಿಸಿರುತ್ತಾರೆ. ಇವರಿಗೆ ಕಾಲೇಜಿನ ಮ್ಯಾನೇಜಿಂಗ್ ಟ್ರಸ್ಟಿ ಡಾ. ರೇಣುಕಾ ಪ್ರಸಾದ್ ಕೆ ವಿ, ಟ್ರಸ್ಟಿ ಡಾ. ಜ್ಯೋತಿ ಆರ್ ಪ್ರಸಾದ್ ಹಾಗೂ ಕಾಲೇಜಿನ ಸಿಇಒ ಡಾ. ಉಜ್ವಲ್ ಯು ಜೆ, ಕಾಲೇಜಿನ ಪ್ರಾಂಶುಪಾಲರಾದ ಡಾ. ಯಶೋದಾ ರಾಮಚಂದ್ರ, ಉಪ ಪ್ರಾಂಶುಪಾಲರಾದ ದೀಪಕ್ ವೈ.ಆರ್ ಹಾಗೂ ಎಲ್ಲಾ ಭೋದಕ ಹಾಗೂ ಭೋದಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದರು.

# ಐವರ್ನಾಡು: ಪಿಯುಸಿಯಲ್ಲಿ ಶೇ.100 ಫಲಿತಾಂಶ

ಐವರ್ನಾಡು ಪದವಿಪೂರ್ವ ಕಾಲೇಜಿಗೆ ಪಿಯುಸಿಯಲ್ಲಿ ಶೇ 100 ಫಲಿತಾಂಶ ದಾಖಲಾಗಿದೆ. ಕಲಾ ವಿಭಾಗದಲ್ಲಿ 5 ಹಾಗೂ ವಾಣಿಜ್ಯ ವಿಭಾಗದಲ್ಲಿ 6 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಎಲ್ಲರೂ ತೇರ್ಗಡೆಯಾಗಿದ್ದಾರೆ. ಡಿಸ್ಟಿಂಕ್ಷನ್ 1 ಹಾಗೂ 6 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ. ಸ್ನೇಹಾ (564) ಅಂಕ ಪಡೆದಿದ್ದಾರೆ.

# ಅಮರ ಸುಳ್ಯ ಸುದ್ದಿ ಯುಗಾದಿ ವಿಶೇಷಾಂಕ ಬಿಡುಗಡೆ, ಮಾಧ್ಯಮ ಕ್ಷೇತ್ರದಲ್ಲಿ ಜನಪರವಾಗಿ ಇನ್ನಷ್ಟು ಕಾಳಜಿ ಮತ್ತು ಎಚ್ಚರಿಸಬೇಕಾದ ನೈಜವರದಿಗಳು ಪ್ರಕಟವಾಗಲಿ– ಜಿ ಮಂಜುನಾಥ್



ಸುಳ್ಯದ ಜನಪರ ಪತ್ರಿಕೆಯಾಗಿ ಕಳೆದ 13 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅಮರ ಸುಳ್ಯ ಸುದ್ದಿ ಪತ್ರಿಕೆಯ ಮೂರನೇ ಆವೃತ್ತಿಯ ಯುಗಾದಿ ವಿಶೇಷಾಂಕವನ್ನು ಸುಳ್ಯ ತಾಲೂಕು ದಂಢಾಧಿಕಾರಿಗಳಾದ ಜಿ ಮಂಜುನಾಥ್ ಲೋಕಾರ್ಪಣೆ ಗೊಳಿಸಿದರು. ಅಮರ ಸುದ್ದಿಯು ಪಕ್ಷ, ಜಾತಿ ಮತ ಭೇದವಿಲ್ಲದೆ ಸಮಾಜದ ಕೈ ಗನ್ನಡಿಯಾಗಿ ನಿರಂತರವಾಗಿ ಮೂಡಿ ಬರುತ್ತಿದ್ದು ಸುಳ್ಯ ತಾಲೂಕು ಕಛೇರಿಯಲ್ಲಿ ಲೋಕಾರ್ಪಣೆ ಕಾರ್ಯಕ್ರಮವನ್ನು ಪತ್ರಿಕೆಯ ಮುಖ್ಯ ಸಂಪಾದಕರಾದ ಮುರಳಿಧರ ಅಡ್ಡನಪಾರೆ ನೇತೃತ್ವದಲ್ಲಿ ನಡೆಸಲಾಯಿತು. ಲೋಕಾರ್ಪಣೆಗೈದು ಮಾತನಾಡುತ್ತಾ ಪತ್ರಿಕೆಯು ಅತ್ಯಂತ ಯಶಸ್ವಿಯಾಗಿ ಮೂಡಿ ಬರುತ್ತಿದ್ದು ನೈಜ ವರದಿಗಳನ್ನು ಸುದ್ದಿಗಳನ್ನು ಸುದ್ದಿಯ ರೀತಿಯಲ್ಲೆ ತರುತ್ತಿದ್ದು ಈ ರೀತಿಯ ಪುಸ್ತಕಗಳು ಮತ್ತು ಪತ್ರಿಕೆಯು ಇನ್ನಷ್ಟು ಜನಪರವಾಗಿ ಕೆಲಸ ನಿರ್ವಹಿಸಲಿ ಎಂದು ಲೋಕಾರ್ಪಣೆ ಗೈದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ತೋಟಗಾರಿಕಾ ಇಲಾಖೆಯ ಎಹೆಚ್ ಒ ಅರ್ಬಣ್ಣ ಪೂಜಾರಿ, ಸೇರಿದಂತೆ ಅಮರಸುದ್ದಿ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು. ಇಂದಿನಿಂದ ನಿಮ್ಮ ಹತ್ತಿರದ ಏಜೆಂಟ್ ಬಳಿಯಲ್ಲಿ ವಿಶೇಷಾಂಕ ಪುಸ್ತಕ ಲಭ್ಯವಿವೆ

# ಗುತ್ತಿಗಾರು: ಸರಕಾರಿ ಪದವಿ ಪೂರ್ವ ಕಾಲೇಜಿಗೆ 96% ಫಲಿತಾಂಶ

2023–24 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು ಸರಕಾರಿ ಪದವಿ ಪೂರ್ವ ಕಾಲೇಜು ಗುತ್ತಿಗಾರು ಇಲ್ಲಿಯ 51 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 96 ಶೇಕಡ ಫಲಿತಾಂಶ ಪಡೆದಿರುತ್ತದೆ. ವಾಣಿಜ್ಯ ವಿಭಾಗ 96% ಹಾಗೂ ಕಲಾ ವಿಭಾಗ 96% ಫಲಿತಾಂಶ ದಾಖಲಾಗಿರುತ್ತದೆ.

ಕಲಾ ವಿಭಾಗದಲ್ಲಿ ರಮ್ಯಾ.ಎನ್.ವಿ 560 ವಿಶಿಷ್ಟ ಶ್ರೇಣಿಯಲ್ಲಿ ಹಾಗೂ ಪ್ರಥಮ ಶ್ರೇಣಿಯಲ್ಲಿ 16, ದ್ವಿತೀಯ ದರ್ಜೆಯಲ್ಲಿ 06, ತೃತೀಯ ಶ್ರೇಣಿಯಲ್ಲಿ 02 ಹಾಗೂ ವಾಣಿಜ್ಯ ವಿಭಾಗ ದೇವಿಕಾ.ಕೆ 547, ಯುಕ್ತಿ.ಕೆ.ಎಂ 547, ದೀಕ್ಷಾ.ಕೆ.ಸಿ 545, ಪೂಜಾ.ಕೆ 526, ದೀಪಿಕಾ.ಹೆಚ್.ಪಿ 524, ಪ್ರಥಮ ಶ್ರೇಣಿಯಲ್ಲಿ 16 ದ್ವಿತೀಯ ಶ್ರೇಣಿಯಲ್ಲಿ 03 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಕಲಾ ವಿಭಾಗ



ರಮ್ಯ ಎನ್.ವಿ 560

ವಾಣಿಜ್ಯ ವಿಭಾಗ



ದೇವಿಕಾ.ಕೆ 547 | ಯುಕ್ತಿ.ಕೆ.ಎಂ 547 | ದೀಕ್ಷಾ.ಕೆ.ಸಿ 545 | ಪೂಜಾ.ಕೆ 526 | ದೀಪಿಕಾ.ಹೆಚ್.ಪಿ 524

# ನವೀನ್ ಚಾತುಬಾಯಿಯವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ರಾಜ್ಯಮಟ್ಟದ ಸಮಗ್ರ ಕೃಷಿಕ ಪ್ರಶಸ್ತಿ



ಸುಳ್ಯ ತಾಲೂಕು ಐವರ್ನಾಡು ಗ್ರಾಮದ ಕೃಷಿಕರಾದ ಸಿ.ಕೆ.ನವೀನ್ ಚಾತುಬಾಯಿಯವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಲ್ಯೂಮ್ನಿ ಎಸೋಸಿಯೇಷನ್ ವತಿಯಿಂದ 2023–24ನೇ ಸಾಲಿಗೆ ನೀಡುವ ಡಾ.ಜಿ.ಕೆ. ವೀರೇಶ್ ರಾಜ್ಯಮಟ್ಟದ ಅತ್ಯುತ್ತಮ ಸಮಗ್ರ ಕೃಷಿ ಪದ್ಧತಿ ರೈತ ಪ್ರಶಸ್ತಿ ದೊರೆತಿದೆ.

ಏ.4ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ ಆವರಣದ ಕುವೆಂಪು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮತ್ತು 25,000/ರೂ.ನಗದು ಬಹುಮಾನ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ ಜಸ್ಟಿಸ್ ವಿ. ಗೋಪಾಲಗೌಡರು ನೆರವೇ–ರಿಸಿದರು. ಮುಖ್ಯ ಅತಿಥಿಗಳಾಗಿ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್. ವಿ. ಸುರೇಶ್, ತೋಟಗಾ–ರಿಕಾ ವಿಶ್ವವಿದ್ಯಾಲಯ ಬಾಗಲಕೋಟೆ, ಕುಲಪತಿಗಳಾದ ಡಾ. ವಿಷ್ಣುವರ್ಧನ್ ಹಾಗೂ ಅಲ್ಯೂಮ್ನಿ ಅಸೋಸಿಯೇಷನ್ ಅಧ್ಯಕ್ಷರಾದ ಡಾ.ಎಚ್. ಎಲ್.ಹರೀಶ್ ರವರು ಉಪಸ್ಥಿತರಿದ್ದರು. ನವೀನ್ ರವರು ಕರಾವಳಿ ಹಾಗೂ ಮಲೆನಾಡು ಕರ್ನಾಟಕ ಭಾಗದಿಂದ ಈ ಪ್ರಶಸ್ತಿಗೆ ಆಯ್ಕೆಯಾಗಿರುವ ಏಕೈಕ ಕೃಷಿಕರಾಗಿದ್ದಾರೆ.

# ಪಿಯುಸಿ ಫಲಿತಾಂಶ: ಬೆಳ್ಳಾರೆ ಜ್ಞಾನದೀಪ ಸಂಸ್ಥೆಗೆ ವಾಣಿಜ್ಯದಲ್ಲಿ ಶೇ.100 ಫಲಿತಾಂಶ



ಪ್ರಥಮ ಪಿಯುಸಿ ಅನುತ್ತೀರ್ಣರಾಗಿ ಅಥವಾ ಎಸ್ಎಸ್ಎಲ್‌ಸಿ ಉತ್ತೀರ್ಣರಾಗಿ ಖಾಸಗಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುತ್ತಿರುವ ಬೆಳ್ಳಾರೆಯ ಜ್ಞಾನದೀಪ ಶಿಕ್ಷಣ ತರಬೇತಿ ಸಂಸ್ಥೆಯ ವಾಣಿಜ್ಯ ವಿಭಾಗದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.100 ಫಲಿತಾಂಶ ದಾಖಲಾಗಿದೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 11 ವಿದ್ಯಾರ್ಥಿಗಳ ಪೈಕಿ ಮೂವರು ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, ಮೂವರು ಪ್ರಥಮ ದರ್ಜೆಯಲ್ಲಿ, ಮೂವರು ದ್ವಿತೀಯ ದರ್ಜೆಯಲ್ಲಿ, ಇಬ್ಬರು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸಿಂಚನಾ ಪಿ (530) ಅಶ್ವಿನಿ ಪಿ (529) ಹಸನ್ ಅಮ್ರಾ ಶಿಹಾಬುದ್ದೀನ್ (521), ಅನನ್ಯ ಸಿ. ಕೆ (475), ವರ್ಷನ್ ಜಿ (454), ಮಹಮ್ಮದ್ ಫಾಝಿಲ್ (363), ಯತೀಶ್ ಜಿ (347), ಆರೀಫ್ ಕೆ. ಎಂ (309), ಗಗನ್ ಯು (307) ಅಂಕ ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 4 ವಿದ್ಯಾರ್ಥಿಗಳ ಪೈಕಿ ಇಬ್ಬರು ಪ್ರಥಮ ದರ್ಜೆಯಲ್ಲಿ ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜಯಾ ಡಿ ಎಸ್ (453), ಪವಿತ್ರ (400) ಅಂಕ ಗಳಿಸಿದ್ದಾರೆ.

# ಬೇಸಗೆ ಶಿಬಿರಕ್ಕಲ್ಲ, ರಜೆಯಲ್ಲಿ ಮಕ್ಕಳನ್ನು ಹಳ್ಳಿಗೊಯ್ಯಿರಿ



ಬೆಳ್ಳಂಬೆಳಗ್ಗೆ ಕಣ್ಣು ಬಿಡುವುದಕ್ಕಿಂತ ಮುಂಚೆಯೇ ಅಮ್ಮನ "ಟ್ಯೂಶನ್‌ಗೆ ಲೇಟ್ ಆಯ್ತು ಏಳೋ ಎನ್ನುವ ಸುಪ್ರಭಾತದಿಂದ ಆರಂಭಿಸಿ ಸಂಜೆಯ ಸಂಗೀತ ಕ್ಲಾಸೋ, ನೃತ್ಯದ ತರಗತಿಯೋ, ಮತ್ತಿನ್ಯಾವುದೋ ಅಪ್ಪ ಅಮ್ಮಂದಿರ ಘನತೆ ಮೆರೆಸುವ ಹುಚ್ಚಾಟದ ತರಗತಿಗಳಿಗೆ ಹೋಗಿ ಮನೆ ಸೇರುವ ಹೊತ್ತಿಗೆ ಮನೆಯಲ್ಲಿ ಹೋಂ ವರ್ಕ್ ಆಗಿಲ್ಲವಾ ಇನ್ನೂ ಎಂಬ ನಿತ್ಯ ಶ್ಲೋಕ.

ಹಮಾಲಿಯಂತ ದೊಡ್ಡ ದೊಡ್ಡ ಚೀಲದಲ್ಲಿ ಪುಸ್ತಕಗಳ ಹೊತ್ತು ತಿರುಗಿಬಂದ ಮಗುವಿಗೆ ಆಗುವ ಸುಸ್ತುಗಳು, ಪೋಷಕರ ಧಾವಂತದಲ್ಲಿ ತಿಂದರೂ ತಿನ್ನದಂತಾಗಿರೋ ಊಟ ತಿಂಡಿಗಳು, ಭಾಷೆಯ ನೆವದಲ್ಲಿ ಭಾವಗಳನ್ನು ಕೊಂದು ಮೂಕರನ್ನಾಗಿಸಿ ಪಂಜರದ ಪಕ್ಷಿಗಳಂತಾಗಿರುವ ಮಕ್ಕಳ ಮನಸ್ಸುಗಳು, ಪರೀಕ್ಷೆಗಳು ಮತ್ತು ಅಂಕಗಳನ್ನು ಮಾತ್ರವೇ ಗುರಿಯನ್ನಾಗಿ ಮಾಡಿಕೊಂಡ ವರ್ಷದ ಎಲ್ಲಾ ಇಪ್ಪತ್ನಾಲ್ಕು ಗಂಟೆಗಳ ಪುರಾಣ ಪ್ರವಚನಗಳನ್ನು ಮುಗಿದು ಜೀವನದ ಅಂತಿಮ ಗುರಿಯೋ ಎನ್ನುವಂತೆ ಪರೀಕ್ಷೆ ಬರೆಸಿ ನಿರಮ್ಮಳವಾಗಿ ಕೂರದೆ ಹೊಸ ಹೊಸ ಯೋಜನೆಗಳ ಮೂಲಕ ರಜೆಯಲ್ಲಿ ಮತ್ತೆ ಮತ್ತೆ ಮಗುವನ್ನು ಹಿಂಡಿಹಾಕುವ ಪೋಷಕರ ಜೊತೆ ನಾಲ್ಕಾರು ಮಾತಾನಾಡುವ ಇಚ್ಛೆ ನನ್ನದು.

ನಿಮ್ಮ ಮಗುವನ್ನು ಕೇವಲ ಎಟಿಎಂ ಯಂತ್ರವನ್ನಾಗಿ ಮಾಡಬೇಕು ಅಂತಲೋ ಅಥವಾ ಹಣ ನಮೂದಿಸದ ಖಾಲಿ ಚೆಕ್ ಪುಸ್ತಕವನ್ನಾಗಿ ಮಾಡಬೇಕು

ಅಂತಲೋ ಅಂದುಕೊಂಡಿದ್ದಲ್ಲಿ ಮೇಲಿನ ನಿಮ್ಮ ಪ್ರಯತ್ನಗಳು ಮುಂದುವರೆಯಲಿ. ನಿಮ್ಮ ಮಗ ಅಥವಾ ನಿಮ್ಮ ಮಗಳು, ಆಕೆಯ ಅಥವಾ ಆತನ ಜೀವನದಲ್ಲಿ ಉತ್ತಮ ಮನುಷ್ಯರಾಗಿ, ಅವರವರ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುವ, ಜೀವನದ ರಸವನ್ನು ಮೊಗೆ ಮೊಗೆದು ಕುಡಿಯುವ, ಜೀವನದ ನೋವು-ನಲಿವುಗಳನ್ನು ಸಮನಾಗಿ ಸಂಭ್ರಮಿಸುವ ಎಲ್ಲದಕ್ಕೂ ಮಿಗಿಲಾಗಿ ಮನುಷ್ಯರಂತೆ ಬಾಳಲಿ ಎಂದು ಭಾವಿಸಿದ್ದಲ್ಲಿ ವರ್ಷದಲ್ಲಿ ಸಿಗುವ ಅತೀ ಕಡಿಮೆ ರಜೆಯಲ್ಲಿ ಅವರು ಅವರಾಗಿಯೇ ಬೆಳೆಯುವಂತಾಗಲು ಅವಕಾಶ ಮಾಡಿಕೊಡಿ.

ಹುಟ್ಟಿದ ಊರಿಂದ ದೂರವಿದ್ದಲ್ಲಿ ನಿಮ್ಮ ಕೆಲಸಕ್ಕೆ ಒಂದಷ್ಟು ದಿನ ರಜೆ ಹಾಕಿ ಮಕ್ಕಳೊಂದಿಗೆ ಆ ಹಳ್ಳಿಗೆ ಹೊರಟುಹೋಗಿ, ಮೊಮ್ಮಕ್ಕಳು ಅಜ್ಜ-ಅಜ್ಜಿಯರ ಮನೆ ಸೇರಲಿ. ಅಜ್ಜ-ಅಜ್ಜಿಯರು ಹಳೆಯ ಕಾಲದ ಸರಕು ಎಂಬ ನಿಮ್ಮ ಅಜ್ಞಾನವನ್ನು ಮಣ್ಣಿನಲ್ಲಿ ಹೂತುಹಾಕಿ. ಮೊಮ್ಮಕ್ಕಳು ಅಜ್ಜ ಅಜ್ಜಿಯರ ತೊಡೆ ಮೇಲೆ ತಮ್ಮ ರಜೆ ಕಳೆಯಲಿ. ಅವರ ಅಪ್ಪುಗೆ, ಸ್ಪರ್ಶದ ಅನುಭೂತಿಯನ್ನು ನೀವು ಕೊಡಿಸುವ ಯಾವ ಬೇಸಿಗೆ ಶಿಬಿರವೂ ನೀಡಲಾರದು. ಅವರು ಹೇಳುವ ಕಥೆಗಳ ಮುಂದೆ ಯಾವ ಕಾರ್ಟೂನ್ಸ್ ಸಿನಿಮಾಗಳು ನಿಲ್ಲಲಾರವು. ಅವರ ಪ್ರೀತಿಗಿಂತ ದೊಡ್ಡ ಸಂಗತಿ ಬಹುಶಃ ನಿಮ್ಮ ಮಗುವಿಗೆ ಈ ಬದುಕಿನಲ್ಲಿ ಸಿಗಲಾರದು. ಮೌಲ್ಯ ಮತ್ತು ಮನರಂಜನೆ ಮೂರ್ತವೆತ್ತ ರೂಪಕಗಳವು.

ಹಳ್ಳಿಯ ಬದುಕಿನಲ್ಲಿ ಆತ್ಮೀಯತೆ, ಮುಗ್ಧತೆ, ಸಹಕಾರ ತತ್ವಗಳು ಎಷ್ಟೊಂದು ಹಾಸುಹೊಕ್ಕಾಗಿವೆ ಮತ್ತು ಇಡೀ ಹಳ್ಳಿಯೊಂದು ಮನೆಯಂತೆ ನಡೆದುಕೊಳ್ಳುವ ರೀತಿಯನ್ನು ನಿಮ್ಮ ಮಗು ಅರಿಯಲಿ. ಮಗುವಿಗೆ ಮಣ್ಣಿನಲ್ಲಿ ಆಡುವುದಕ್ಕೆ ಬಿಡಿ, ಆ ಮಣ್ಣಿನ ಸೊಬಗಿನ ಸವಿಗಂಪನ್ನು ಮಗು ಆಘ್ರಾಣಿಸಲಿ. ಹಳ್ಳಿಯ ಮಕ್ಕಳೊಂದಿಗೆ ಬೆರೆಯುವುದಕ್ಕೆ ಅವಕಾಶ ಮಾಡಿಕೊಡಿ ಅಲ್ಲಿಯ ಮಕ್ಕಳ ಬದುಕಿನೊಂದಿಗೆ ಮಗು ತನ್ನ ಬದುಕನ್ನು ಹೋಲಿಸಿಕೊಳ್ಳಲಿ ಬಿಸಿಲಿನಲ್ಲಿ ಬೆವರಲಿ, ಬೆವರ ಹನಿಗಳ ಪರಿಚಯವಾಗಲಿ. ಹಳ್ಳಿಯ ಆಟಗಳನ್ನಾಡಲಿ. ಆಟವೆಂದರೆ ಕೇವಲ ಕ್ರಿಕೆಟ್ ಅಥವಾ ವಿಡಿಯೋ ಗೇಮ್ಸ್ ಅಂದುಕೊಂಡಿರುವ ಮಗುವು ಗೋಲಿ, ಬುಗರಿ, ಒಂಟಿಕಾಲಿನ ಆಟ ಮರಕೋತಿ, ಚೌಕಬಾರ ಆಟಗಳ ಸಂತಸವನ್ನು, ಅದರ ಹಿಂದಿರುವ ಮೌಲ್ಯಗಳನ್ನು ಮನತುಂಬಿಸಿಕೊಳ್ಳಿ.

ಬಿಡುವಿದ್ದಾಗ ಹೊಲ, ಗದ್ದೆಗಳ ಕಡೆ ಕರೆದೊಯ್ಯಿರಿ. ಕಟ್ಟಿದ ಇರುವೆಗಳ ಗೂಡು, ಅವುಗಳ ಬದುಕಿನ ಕೌತುಕ, ಮೊಳಕೆ ಒಡೆದ ಬೀಜ, ಆಗ ತಾನೆ ಚಿಗುರಿದ ಎರಡೆಲೆಗಳು, ಹಾರುವ ದುಂಬಿಗಳು, ಹಾಡುವ ಪಕ್ಷಿಗಳು, ಹರಿಯುವ ನದಿ, ತುಂಬಿದ ಕೆರೆ, ಭೂಮಿತಾಯಿ ಹಸಿರು ಸೀರೆ ತೊಟ್ಟಂತೇ ತೋರುವ ಬತ್ತದ ಪೈರು ,ಹಳ್ಳಿಯ ಸೊಗಸು, ರೈತನ ಬಾಳು, ದನ ಕರುಗಳು ಮೇಯುವ ಠೀವಿ ಇವೆಲ್ಲಾ ಯಾವ ಫ್ಯಾಂಟಸಿ ಪಾರ್ಕ್‌ನಲ್ಲಿ ಸಿಕ್ಕಾವು!?

ನನಗಂತೂ ಮರೆಯಲು ಅಸಾಧ್ಯ ಮಾಯಿಲಪ್ಪ ಗೌಡರ ಮನೆಗೆ ಹೋಗುವ ದಾರಿನಡುವಿನ ಬೀಟೆ ಮರ , ನಡುವೆ ಕಾಡುಮಾವಿನ ಮರದ ಸುತ್ತ ಹಣ್ಣಿಗಾಗಿ ಕಾಯುವ ಮಕ್ಕಳ ಜಾತ್ರೆ .ಇತ್ತ ನೋಡಿದರೆ ಕಾಪುಮಲೆಯ ಬ್ರಹತ್ ಆಕಾರದ ನೆಕ್ಕರೆ ಮಾವಿನ ಮರ.. ಮೇಲಿನಿಂದ ಗೇರುಹಣ್ಣಿಗಾಗಿ ಹಾಗಮಿಸುತ್ತಿರುವ ದುಗ್ಗಮ್ಮ ಅಜ್ಜಿ ..ಕಾರ್ಕಳದಿಂದ ಬಾಳೆಗೊನೆ ತರಕಾರಿಗಳನ್ನು ಮಡಕೆಯಲ್ಲಿ ತುಂಬಿತರುವ ಕುಂಬಳಚೇರಿ ಕಾದರ್ ಬಾಯಿ . ಇತ್ತ ಕಡೆಯಿಂದ ರಾತ್ರಿಯಾಗುತಿದ್ದಂತೇ ಸಮುದ್ರದ ದಡದಲ್ಲಿ ಹಡಗಿಗಾಗಿ ನಿರ್ಮಿಸಿರುವ ದ್ವೀಪಸ್ಥಂಭದಂತೇ ಆಕಾಶಕ್ಕೆ ಟೋರ್ಚ್ ತೋರಿಸಿ ಮನೆಯಿಂದ ಹೊರಡುವ ಅಲವಿಯಾಕ. ಹೀಗೇ ಮುಗಿಯಲಾರದಸ್ಟು .

ಅಜ್ಜಿ ಮಾಡಿದ ರೊಟ್ಟಿ, ಚಟ್ನಿ, ಗಂಜಿ ಒಣಮೀನಿನ ಊಟ, ಕೆನೆ ಮೊಸರಿನ ಸವಿ, ಕಡುಬು ಕಲ್ತಪ್ಪದ ತಾಕತ್ತಿನ ಮುಂದೆ ಪಿಝಾ ಬರ್ಗರ್ ನಿಲ್ಲಲಾರವು ಎಂಬುದನ್ನು ಅವರು ಅರಿತುಕೊಳ್ಳಲಿ. ಊರಿನ ಒಗ್ಗಟ್ಟು, ಅಲ್ಲಿನ ಶಿಸ್ತುಬದ್ಧ ಜೀವನ, ಕೊಡು ಕೊಳ್ಳುವ ಬಾಳ್ವೆ, ಸದಾ ಸಹಾಯಕ್ಕೆ ಧಾವಿಸುವ ಅವರ ಒಳ್ಳೆಯತನ, ಪ್ರಕೃತಿಯಿಂದ ಅವರು ಕಲಿಯುವ ಪಾಠ, ಹಬ್ಬ ಹರಿದಿನಗಳ ಸೊಗಸು, ಮುಗ್ಧತೆಯಲ್ಲಿಯೇ ಅವರು ಅನುಭವಿಸುವ ಖುಷಿಯನ್ನು ಕಲಿತುಕೊಳ್ಳಿ ಎಂದು ಮಕ್ಕಳಿಗೆ ತಿಳಿಸಿ.

ರೈತನ ಕಷ್ಟದ ಬದುಕನ್ನು ಪರಿಚಯಿಸಿ, ಬರಿದಾದ ಕೆರೆಯನ್ನು ತೋರಿಸಿ, ಒಣಗಿದ ಬೆಳೆಯನ್ನು (ನಮ್ಮ ಸುಳ್ಯದಲ್ಲಂತೂ ಅಪರೂಪ ) ತೋರಿಸಿ, ನೀರಿಲ್ಲದೆ ಪರಿತಪಿಸುವ ಪಶು ಪಕ್ಷಿಗಳನ್ನು ಕಣ್ಮುಂದಿರಿಸಿ.

ಪ್ರಕೃತಿಯೊಂದಿಗೆ ಹೊಂದಿಕೊಂಡು ಅದನ್ನೇ ದೇವರೆಂದು ಭಾವಿಸುವ, ಪೂಜಿಸುವ ಹಳ್ಳಿಯ ಜನರ ಪ್ರಕೃತಿಪರ ಕಾಳಜಿ, ಸೌಜನ್ಯವನ್ನು, ನಿಷ್ಠೆಯನ್ನು ಮಗು ತಿಳಿಯಲಿ. ಇಡೀ ಮಾನವ ಕುಲವನ್ನು ಸಾಕುತ್ತಿರುವ ಈ ಹೊಲಗದ್ದೆಗಳು ಮತ್ತು ಅದರೊಳಗೆ ಒಂದಾಗಿ ದುಡಿಯುತ್ತಿರುವ ನೇಗಿಲಯೋಗಿಯ ಮುಂದೆ ಯಾವ ಯೋಗಿಯೂ ಇಲ್ಲ ಎಂಬ ಸತ್ಯವನ್ನು ಮಗು ಅರಿಯಲಿ.

ಕಂಪ್ಯೂಟರ್ ಕುಟ್ಟುತ್ತಾ ಕೂರುವುದು, ಸ್ಟೆತಸ್ಕೋಪ್ ಹಿಡಿಯುವುದೇ ಜೀವನದ ಮಹಾನ್ ಗುರಿಯೆಂದುಕೊಂಡ ಮಗುವು ರೈತನನ್ನು, ಹಳ್ಳಿಯ ಬದುಕನ್ನು ನೋಡಿ ಇನ್ನೊಬ್ಬರಿಗಾಗಿ ಬದುಕುವುದೇ ನಿಜವಾದ ಬದುಕು ಎಂದು ಅರಿತುಕೊಳ್ಳದಿದ್ದರೆ ಕೇಳಿ! ಯಾವ ಬೇಸಿಗೆ ಶಿಬಿರದಲ್ಲೂ, ಕಾನ್ವೆಂಟ್‌ಗಳ ಇಂಗ್ಲಿಷ್ ಪಿಟೀಲ್ ಶಬ್ದದಲ್ಲೂ, ದುಡ್ಡು ಸುರಿದು ದುಡ್ಡು ಮಾಡುವೆ ಎಂದು ತಮ್ಮ ವ್ಯಕ್ತಿತ್ವವನ್ನೇ ವ್ಯವಹಾರದ ಸರಕನ್ನಾಗಿಸಿಕೊಳ್ಳುವ ಶಿಕ್ಷಣ ಕ್ರಮದಲ್ಲೂ ಸಿಗದ ಬದುಕಿನ ಪಾಠ ಮಕ್ಕಳಿಗೆ ಇಲ್ಲಿ ಸಿಗುತ್ತದೆ. ಹಳ್ಳಿ ಮತ್ತು ಹಳ್ಳಿಯೊಂದಿಗೆ ಬದುಕುವ ರೈತ ಮತ್ತು ಆತನ ಬದುಕು ಕಲಿಸಿಕೊಡುವ ಪಾಠವನ್ನು ಯಾವ ಆಕ್ಸ್ ಫರ್ಡ್ ಯುನಿವರ್ಸಿಟಿಯೂ ಕಲಿಸಿಕೊಡಲಾಗದು. ಅಲ್ಲವೇ?

– ಮುಝುಂಮ್ಮಿಲ್ ಅಂಜಿಕ್ಕಾರ್
(ಹವ್ಯಾಸಿ ಬರಹಗಾರ)

# ಅರಂತೋಡು ತೆಕ್ಕಿಲ್ ಪ್ರತಿಷ್ಠಾನದ ವತಿಯಿಂದ 19ನೇ ವರ್ಷದ ಸೌಹಾರ್ದ ಇಫ್ತಾರ್‌ಕೂಟ




ತೆಕ್ಕಿಲ್ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ (ರಿ.) ಅರಂತೋಡು ಇದರ ವತಿಯಿಂದ 19ನೇ ವರ್ಷದ "ಸೌಹಾರ್ದ ಇಫ್ತಾರ್‌ಕೂಟ" ಎಪ್ರಿಲ್ 8ರಂದು ತೆಕ್ಕಿಲ್ ಸಮುದಾಯ ಭವನದಲ್ಲಿ ತೆಕ್ಕಿಲ್ ಪ್ರತಿಷ್ಠಾನದ ಸ್ಥಾಪಕಾಧ್ಯಕ್ಷರಾದ ಟಿ.ಎಂ. ಶಹೀದ್ ತೆಕ್ಕಿಲ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅರಂತೋಡು ಬದ್ರಿಯಾ ಜುಮಾ ಮಸೀದಿ ಖತೀಬರಾದ ಬಹು| ಇಸ್ಮಾಯಿಲ್ ಫೈಝಿ ದುವಾ ನೆರವೇರಿಸಿದರು. ತಿಂಗಳ 28ರ ಉಪವಾಸ ದಿನದಂದು ನಡೆದ ಇಫ್ತಾರ್‌ಕೂಟದಲ್ಲಿ ಸರ್ವಧರ್ಮದ ಅನೇಕ ಮಂದಿ ಪಾಲ್ಗೊಂಡಿದ್ದರು. ತೆಕ್ಕಿಲ್ ಪ್ರತಿಷ್ಠಾನದ ಪ್ರತಿಷ್ಠಾನದ ಕಾರ್ಯದರ್ಶಿ ಅಶ್ರಫ್ ಗುಂಡಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿ ಮುಸಲ್ಮಾನ ಭಾಂದವರು ಒಂದು ತಿಂಗಳು ಉಪವಾಸ ಮಾಡುವುದರ ಜೊತೆಗೆ ಬಡ ಬಗ್ಗರಿಗೆ ದಾನ ಮಾಡುವುದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತಿದ್ದಾರೆ ಎಂದರು ಕಳೆದ 18 ವರ್ಷಗಳಿಂದ ಸೌಹಾರ್ದ ಇಫ್ತಾರ್ ಮಾಡಿಕೊಂಡು ಬಂದಿರುವುದು ಎಲ್ಲಾ ಸಮುದಾಯದವರನ್ನು ಆಹ್ವಾನಿಸಿ ಸತ್ಕರಿಸುವ ಮೂಲಕ ಸಂಸ್ಥೆ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ ಎಂದು ಹೇಳಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಅಧ್ಯಕ್ಷರಾದ ಟಿ ಎಂ ಶಾಹಿದ್ ತೆಕ್ಕಿಲ್ ಅವರನ್ನು ಅಭಿನಂದಿಸಿದರು ,ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸದಸ್ಯರಾದ ಅಶೋಕ್ ಎಡಮಲೆ, ನಿವೃತ್ತ ಮುಖ್ಯೋಪಾಧ್ಯಾಯ ದಾಮೋದರ ಮಾಸ್ತರ್, ಗಾಂಧಿನಗರ ಜುಮಾ ಮಸೀದಿ ಅಧ್ಯಕ್ಷ ಕೆ.ಎಂ. ಮುಸ್ತಫ, ನಗರ ಪಂಚಾಯತ್‌ನ ಮಾಜಿ ಸದಸ್ಯ ಗೋಕುಲ್‌ದಾಸ್, ಸುಳ್ಯ ವೆಂಕಟ್ರಮಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಟಿ. ವಿಶ್ವನಾಥ್ ಮೊದಲಾದವರು ಕಾರ್ಯಕ್ರಮಕ್ಕೆ ಶುಭ ಹಾರೈಸಿ ಪ್ರತಿಷ್ಟಾನದ ಮತ್ತು ಟಿ ಎಂ ಶಾಹಿದ್ ತೆಕ್ಕಿಲ್ ಅವರ ಸಮಾಜ ಸೇವೆಯನ್ನು ಕೊಂಡಾಡಿದರು.

ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಸಿ. ಜಯರಾಮ, ಕಲ್ಲುಗುಂಡಿ ವಿಷ್ಣುಮೂರ್ತಿ ದೈವಸ್ಥಾನದ ಅಧ್ಯಕ್ಷ ಜಗದೀಶ್ ರೈ, ಗುತ್ತಿಗಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಪರಶುರಾಮ ಚಿಲ್ತಡ್ಕ, ಅರಂತೋಡು ಭಜನಾ ಮಂದಿರ ಅಧ್ಯಕ್ಷ ಕೆ.ಆರ್. ಪದ್ಮನಾಭ ಕುರುಂಜಿ, ಕೆವಿಜಿ ಆಯುರ್ವೇದ ಮೆಡಿಕಲ್ ಕಾಲೇಜಿನ ವೈದ್ಯರಾದ ಡಾ| ಹರ್ಷವರ್ಧನ ಕುತ್ತಮೊಟ್ಟೆ, ನಗರ ಪಂಚಾಯತ್ ಮಾಜಿ ಅಧ್ಯಕ್ಷ ಎಸ್. ಸಂಶುದ್ದೀನ್, ತಾಲೂಕು ಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹಮೀದ್ ಕುತ್ತಮೊಟ್ಟೆ, ಜಿಲ್ಲಾ ಗ್ಯಾರೆಂಟಿ ಅನುಷ್ಠಾನ ಸಮಿತಿ ಸದಸ್ಯ ರಂಜಿತ್ ರೈ ಮೇನಾಲ, ತಾಲೂಕು ಪಂಚಾಯತ್ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಹರೀಶ್ ಬಂಟ್ವಾಳ, ಪಿ.ಎ. ಮಹಮ್ಮದ್ ಸುಳ್ಯ, ತಾಜ್ ಮೊಹಮ್ಮದ್ ಸಂಪಾಜೆ, ಹಾಜಿ ಹೆಚ್.ಎ. ಅಬ್ಬಾಸ್ ಸೆಂಟ್ಯಾರ್, ಸುನ್ನಿಮಹಲ್ ಅಧ್ಯಕ್ಷ ಹಮೀದ್ ಹಾಜಿ, ನಗರ ಪಂಚಾಯತ್ ಸದಸ್ಯ ಶರೀಫ್ ಕಂಠಿ, ನಾಮ ನಿರ್ದೇಶಕ ಸದಸ್ಯರಾದ ಸಿದ್ದೀಕ್ ಕೊಕ್ಕೊ, ರಾಜುಪಂಡಿತ್, ಭಾಸ್ಕರ ಪೂಜಾರಿ, ಭವಾನಿಶಂಕರ ಕಲ್ಮಡ್ಕ, ನ್ಯಾಯವಾದಿಗಳಾದ ಅಬೂಬಕ್ಕರ್ ಅಡ್ಕಾರ್, ಮೂಸಾ ಪೈಂಬಚ್ಚಾಲ್, ಸಂಪಾಜೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಜಿ.ಕೆ. ಹಮೀದ್ ಗೂನಡ್ಕ, ಸದಸ್ಯ ಅಬುಸಾಲಿ ಗೂನಡ್ಕ, ತೆಕ್ಕಿಲ್ ಪ್ರತಿಷ್ಠಾನದ ಉಪಾಧ್ಯಕ್ಷ ಟಿ.ಎಂ. ಶಾಝ್ ತೆಕ್ಕಿಲ್, ಟ್ರಸ್ಟಿ ಟಿ.ಎಂ. ಶಮೀರ್ ತೆಕ್ಕಿಲ್, ಕೋಶಾಧಿಕಾರಿ ಟಿ.ಎಂ. ಜಾವೇದ್ ತೆಕ್ಕಿಲ್, ಜಾಲ್ಸೂರು ಗ್ರಾ.ಪಂ. ಸದಸ್ಯ ಅಬ್ದುಲ್ ಮಜೀದ್ ಅಡ್ಕಾರ್, ದ.ಕ. ಜಿಲ್ಲಾ ವಕ್ಫ್ ಸಲಹಾ ಸಮಿತಿ ಉಪಾಧ್ಯಕ್ಷ ಅಬ್ದುಲ್ ರಹಿಮಾನ್ ಮೊಗರ್ಪಣೆ, ಸುಳ್ಯ ತಲೂಕು ಜಮೀಯತ್ತುಲ್ ಫಲಾಹ್ ಅಧ್ಯಕ್ಷ ಕೆ.ಎಂ. ಅಬೂಬುಕ್ಕರ್ ಪಾರೆಕ್ಕಲ್, ತೆಕ್ಕಿಲ್ ಶಿಕ್ಷಣ ಸಂಸ್ಥೆಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಉನೈಸ್ ಪೆರಾಜೆ, ಮುಖ್ಯೋಪಾಧ್ಯಾಯ ಸಂಪತ್, ಪಟೇಲ್ ಚಾರಿಟೇಬಲ್ ಅಧ್ಯಕ್ಷ ಬದ್ರುದ್ದೀನ್ ಪಟೇಲ್, ಎಸ್ ಕೆ ಎಸ್ ಎಸ್ ಎಫ್ ನ ಖಲಂದರ್ ಎಲಿಮಲೆ,ಎಸ್ ಎಸ್ ಎಫ್ ನ ಸಿದ್ದಿಕ್ ಕಟ್ಟೆಕ್ಕಾರ್, ಇವಾರ್ತೆ ಟಯ ರಶೀದ್ ಜಟ್ಟಿಪಳ್ಳ, ಸುದ್ದಿ ಪತ್ರಿಕೆಯ ವ್ಯವಸ್ಥಾಪಕ ಯಶ್ವಿತ್ ಕಾಳಮನೆ, ಕೃಷ್ಣ ಬೆಟ್ಟ, ಶರೀಫ್ ಜಟ್ಟಿಪಳ್ಳ, ಹನೀಫ್ ಸೆಂಟ್ಯಾರ್, ಎಸ್. ಎಂ. ಅಬ್ದುಲ್ ಮಜೀದ್, ತಿಮ್ಮಯ್ಯ ತೊಡಿಕಾನ, ಅಣ್ಣಾದೊರೈ ಅಡ್ಯಡ್ಕ, ಚಂದ್ರಶೇಖರ ಮಾಸ್ತರ್ ಕಲ್ಲುಗದ್ದೆ ಮೊದಲಾದವರು ಉಪಸ್ಥಿತರಿದ್ದರು.

# ಸುಳ್ಯ ಸಿಎ ಬ್ಯಾಂಕ್ ಮುಂಭಾಗ ಮಲಗಿದ್ದ ಅಪರಿಚಿತ ವ್ಯಕ್ತಿ ಸಾವು, ಮೃತದೇಹ ಆಸ್ಪತ್ರೆಗೆ ರವಾನೆ



ಸುಳ್ಯ ಸಿ ಎ ಬ್ಯಾಂಕ್ ಮುಂಭಾಗ ಮಲಗಿದ್ದ ಅಪರಿಚಿತ ವ್ಯಕ್ತಿ ಒಬ್ಬರು ಮೃತಪಟ್ಟ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ.

ಮೃತ ದೇಹವನ್ನು ಪ್ರಗತಿ ಅಂಬ್ಯುಲೆನ್ಸ್‌ನಲ್ಲಿ ಅಚ್ಚು ಪ್ರಗತಿಯವರು ಸುಳ್ಯ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದ್ದು ಮೃತಪಟ್ಟ ವ್ಯಕ್ತಿಯ ಹೆಚ್ಚಿನ ಮಾಹಿತಿ ಇನ್ನಷ್ಟೆ ತಿಳಿದು ಬರಬೇಕಿದ್ದು ಇದೀಗ ಪೋಲೀಸ್ ಇಲಾಖೆಯು ವ್ಯಕ್ತಿಯ ಮಾಹಿತಿ ಕಲೆಹಾಕಲು ಪ್ರಾರಂಭಿಸಿರುವುದಾಗಿ ತಿಳಿದುಬಂದಿದೆ.

# ಮಂಗಳೂರಿನಲ್ಲಿ ರೈಲಿನಡಿಗೆ ಬಿದ್ದು ಆಚಳ್ಳಿ ಯುವಕ ಮೃತ್ಯು!



ಮಂಗಳೂರಿನಲ್ಲಿ ರೈಲಿನಡಿಗೆ ಬಿದ್ದು ಗುತ್ತಿಗಾರು ಗ್ರಾಮದ ಆಚಳ್ಳಿ ಯುವಕನೋರ್ವ ಮೃತಪಟ್ಟ ಘಟನೆ ಏ. 07 ರಂದು ನಡೆದಿದೆ.


ಗುತ್ತಿಗಾರು ಗ್ರಾಮದ ಆಚಳ್ಳಿ ಹಂದಿಪಾರೆ ನಿವಾಸಿ ಸುಪ್ರೀತ್ ನಾಯ್ಕ ರವರು ಮೃತಪಟ್ಟ ದುರ್ದೈವಿ. ತನ್ನ ತಾಯಿ ಹಾಗೂ ಅಕ್ಕನೊಂದಿಗೆ ಮಂಗಳೂರಿನಲ್ಲಿ ನೆಲೆಸಿರುವ ಈತ ಏ.6 ರಂದು ರಾತ್ರಿ ವೇಳೆ ಮನೆಯಿಂದ ಹೋಟೆಲ್‌ಗೆಂದು ಬಂದಿದ್ದ, ಸ್ವಲ್ಪ ಹೊತ್ತಿನ ಬಳಿಕ ಮನೆಯವರಿಗೆ ವೆನ್ಲಾಕ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಮಾಹಿತಿ ಬಂದಿದೆ. ಕಾಲು ಹಾಗೂ ಕೈ ತುಂಡಾಗಿದ್ದರಿಂದ ರಕ್ತಸ್ರಾವ ಹೆಚ್ಚಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೇ ಮರುದಿನ ಮೃತಪಟ್ಟರು ಎಂದು ತಿಳಿದುಬಂದಿದೆ.

# ಪರಿವಾರಕಾನ ಹೋಟೆಲ್ ಉಡುಪಿ ಗಾರ್ಡನ್ ಮುಂಬಾಗಲ್ಲಿ ಗುಡ್ಡಕ್ಕೆ ಬೆಂಕಿ, ಆಗ್ನಿಶಾಮಕ ದಳ ಆಗಮನ



ಸುಳ್ಯ ಪರಿವಾರಕಾನದ ಬಳಿಯಲ್ಲಿ ರಿಕ್ಷಾ ಗ್ಯಾರೆಜ್ ಹಿಂಬಾಗದಲ್ಲಿ ಗುಡ್ಡಕ್ಕೆ ಬೆಂಕಿ ಬಿದ್ದ ಘಟನೆ ಏ.07 ರಂದು ವರದಿಯಾಗಿದೆ. ಸ್ಥಳಕ್ಕೆ ಅಗ್ನಿ ಶಾಮಕದಳ ಆಗಮಿಸಿದ್ದು ಅಗ್ನಿಶಾಮಕ ದಳದವರ ಜೊತೆಗೆ ಪ್ರಗತಿ ಆಂಬುಲೆನ್ಸ್ ಚಾಲಕ ಅಚ್ಚು ಬೆಂಕಿ ನಂದಿಸಲು ಸಹಕರಿಸುತ್ತಿದ್ದಾರೆ.

# ಜೋಡುಪಾಲ : ಖಾಸಗಿ ಬಸ್ಸು ಪಲ್ಟಿ



ಬೆಂಗಳೂರಿನಿಂದ ಸುಳ್ಯಕ್ಕೆ ಬರುತ್ತಿದ್ದ ಗೌರಿಶಂಕರ್ ಬಸ್ಸು ಚಾಲಕನ ನಿಯಂತ್ರಣ ತಪ್ಪಿ ಮಗುಚಿಬಿದ್ದ ಘಟನೆ ಏ.07ರಂದು ಬೆಳಿಗ್ಗೆ ಜೋಡುಪಾಲ ಬಳಿ ನಡೆದಿದೆ. ಹಲವು ಸಣ್ಣ ಪುಟ್ಟ ಜನರಿಗೆ ಗಾಯಗಳಾಗಿವೆ ಎನ್ನಲಾಗಿದೆ.

# ಹಾಲೆಮಜಲು: ಚಾಲಕನ ನಿಯಂತ್ರಣ ತಪ್ಪಿ ತೋಟಕ್ಕುರುಳಿದ ಓಮಿನಿ



ಹಾಲೆಮಜಲು ಬಸ್ ನಿಲ್ದಾಣದ ಸಮೀಪ ಚಾಲಕನ ನಿಯಂತ್ರಾ ತಪ್ಪಿದ ಓಮಿನಿ ಕಾರು ತೋಟಕ್ಕುರುಳಿದ ಘಟನೆ ಏ.09ರ ರಾತ್ರಿ ನಡೆದಿದೆ. ಜಯರಾಮ್ ಕರಂಗಲ್ಲು ಎಂಬವರು ಚಲಾಯಿಸುತ್ತಿದ್ದ ಓಮಿನಿ ಸುಮಾರು 50 ಅಡಿ ಕೆಳಗೆ ಪಲ್ಟಿಯಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ.

# ಬೈಕ್ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಬೆಳ್ಳಾರೆಯ ಬಾಲಕ ಆಸ್ಪತ್ರೆಯಲ್ಲಿ ಮೃತ್ಯು



ಬೈಕ್ ಅಪಘಾತದಲ್ಲಿ ಬೆಳ್ಳಾರೆ ಉಮಿಕ್ಕಳ ಮಹಮ್ಮದ್ ರಾಝಿಕ್ ಎಂಬ ಬಾಲಕ ಸಾವನ್ನಪ್ಪಿದ ಘಟನೆ ಏ.11ರಂದು ವರದಿಯಾಗಿದೆ

ಮೃತಪಟ್ಟ ಬಾಲಕನ್ನು ಬೆಳ್ಳಾರೆ ಸಮೀಪದ ಉಮಿಕ್ಕಳ ನಿವಾಸಿ ಮಹಮ್ಮದ್ ರಾಝಿಕ್ ಎಂದು ತಿಳಿದು ಬಂದಿದೆ ಈ ಅಪಘಾತವು ಪೆರುವಾಜೆ ಎಂಬಲ್ಲಿ ನಡೆದಿತ್ತು ಎಂದು ತಿಳಿದುಬಂದಿದೆ.

# ಬೈಕ್ ಕಳ್ಳತನ ಪ್ರಕರಣ ಪತ್ತೆಹಚ್ಚಿದ ಸುಬ್ರಹ್ಮಣ್ಯ ಪೊಲೀಸರು–ಆರೋಪಿಗಳ ಬಂಧನ




ಗುತ್ತಿಗಾರು ಸಮೀಪ ರಸ್ತೆ ಬದಿ ನಿಲ್ಲಿಸಿದ್ದ (ಏಂ21ಏ9114) ಬೈಕನ್ನು ಕಳ್ಳತನ ನಡೆಸಿರುವ ಬಗ್ಗೆ ಸುಬ್ರಮಣ್ಯ ಠಾಣೆಯಲ್ಲಿ ದೂರು ದಾಖಲಾಗಿತ್ತು. ಸುಬ್ರಮಣ್ಯ ಠಾಣಾಧಿಕಾರಿ ಕಾರ್ತಿಕ ನೇತೃತ್ವದ ತಂಡ ಆರೋಪಿಗಳನ್ನು ಪತ್ತೆ ಹಚ್ಚಿ ಹಾಸನ ಮೂಲದ ಆರೋಪಿಗಳಾದ ಚಂದನ್ ಹಾಗೂ ವರದಾರಜ್ ಎಂಬುವವರಿಂದ ಕದ್ದಿರುವ ಬೈಕನ್ನು ಮಡಿಕೇರಿಯಲ್ಲಿ ಜಪ್ತಿ ಮಾಡಿ ವಶಪಡಿಸಿಕೊಳ್ಳಲಾಯಿತು. ಪ್ರಕರಣ ಭೇದಿಸಿದ ಸುಬ್ರಹ್ಮಣ್ಯ ಪೊಲೀಸರು ಆರೋಪಿಗಳನ್ನು ಮಂಗಳೂರು ಜೈಲಿಗಟ್ಟಿದ್ದಾರೆ.

# ಪೈಕ : ಭಾರಿ ಗಾಳಿ, ಮನೆಗೆ ಹಾನಿ



ಗುತ್ತಿಗಾರಿನ ಪೈಕ ಎಂಬಲ್ಲಿ ಬೀಸಿದ ಭಾರಿ ಗಾಳಿಯಿಂದ ಮಾಲತಿ ಎಂಬ ಮಹಿಳೆಯ ಮನೆ ಬಿದ್ದು ಸಂಪೂರ್ಣ ಜಖಂಗೊಂಡಿದೆ. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಮಹಿಳೆ ಗುಡಿಸಲು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸ್ಥಳಕ್ಕೆ ಗ್ರಾ.ಪಂ. ಅಧ್ಯಕ್ಷೆ , ಪಿಡಿಓ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

# ಮಂಡೆಕೋಲು ಮಹಿಳೆ ನೇಣುಬಿಗಿದು ಆತ್ಮಹತ್ಯೆ

**ಸುಳ್ಯ:** ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಮಹಿಳೆಯೋರ್ವರು ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಆತ್ಮಹತ್ಯೆ ಮಾಡಿಕೊಂಡ ಮಹಿಳೆಯನ್ನು ಇಂದಿರ 74 ಎಂದು ತಿಳಿದು ಬಂದಿದ್ದು ಇವರು ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಗಲಿದ್ದಾರೆ. ಆತ್ಮಹತ್ಯೆಗೆ ಮೊಣಕಾಲಿನ ಚಿಪ್ಪು ನೋವು ಮತ್ತು ಮೂರು ವರ್ಷಗಳ ಹಿಂದೆ ಪತಿಯ ಮರಣ ಕಾರಣವಾಗಿರಬಹುದು ಎಂದು ಹೇಳಲಾಗುತ್ತಿದೆ.

# ದ್ವಿತೀಯ ಪಿಯುಸಿ ಫಲಿತಾಂಶ ಸುಳ್ಯ ಎನ್. ಎಂ.ಪಿ.ಯು.ಸಿ.ಗೆ ಶೇ.99.17% ಫಲಿತಾಂಶ



ಮರಿಯಮತ್ ಹಬ್ಸಿನ | ಕೆ ಸಹನ ಭಟ್ | ಅಮೃತ ಹೆಚ್

ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಸುಳ್ಯ ಎನ್. ಎಂ.ಪಿ.ಯು. ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ 121 ವಿದ್ಯಾರ್ಥಿಗಳಲ್ಲಿ 120 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. .99.17/.ಫಲಿತಾಂಶ ದಾಖಲಾಗಿದೆ.

ಒಟ್ಟು 46 ಮಂದಿ ಡಿಸ್ಟಿಂಕ್ಷನ್, 72ಮಂದಿ ಪ್ರಥಮ ದರ್ಜೆ, ಹಾಗೂ 2ಮಂದಿ ದ್ವಿತೀಯ ದರ್ಜೆಯ ಅಂಕಗಳನ್ನು ಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 73 ವಿದ್ಯಾರ್ಥಿಗಳಲ್ಲಿ 72 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 98.63% ವಾಣಿಜ್ಯ ವಿಭಾಗದ 38 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿ ಶೇ 100% ಮತ್ತು ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ 10ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿ ಶೇ. 100 ಫಲಿತಾಂಶ ದಾಖಲಾಗಿದೆ. ವಿಜ್ಞಾನ ವಿಭಾಗದ ಕೆ ಸಹನ ಭಟ್ 575ವಾಣಿಜ್ಯ ವಿಭಾಗದ ಮರಿಯಮತ್ ಹಬ್ಸಿನ 587ಮತ್ತು ಕಲಾ ವಿಭಾಗದ ಅಮೃತ ಹೆಚ್ 562ಅಂಕಗಳನ್ನು ಪಡೆದುಕೊಂಡು ಕಾಲೇಜಿಗೆ ಪ್ರಥಮ ಸ್ಥಾನಿಗಳಾಗಿದ್ದಾರೆ. ಅತ್ಯುತ್ತಮ ಫಲಿತಾಂಶ ದಾಖಲಿಸಿದ ವಿದ್ಯಾರ್ಥಿಗಳನ್ನು ಕಾಲೇಜಿನ ಅಧ್ಯಕ್ಷರು, ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ –ಬೋಧಕೇತರ ವೃಂದದವರು ಅಭಿನಂದಿಸಿದ್ದಾರೆ.

# ಅರಂತೋಡು : ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿಗೆ ಪಿಯುಸಿಯಲ್ಲಿ ಶೇ. 99 ಫಲಿತಾಂಶ




ಅರಂತೋಡಿನ ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿಗೆ ಪಿಯುಸಿಯಲ್ಲಿ ಶೇ. 99 ಫಲಿತಾಂಶ ದಾಖಲಾಗಿದೆ. ಕಲಾ ವಿಭಾಗದಲ್ಲಿ ಶೇ. 100, ವಾಣಿಜ್ಯ ವಿಭಾಗದಲ್ಲಿ (HEBA) ಶೆ.100, ವಿಜ್ಞಾನ ವಿಭಾಗ ಶೇ. 98.2, ವಾಣಿಜ್ಯ(EBAC) ವಿಭಾಗದಲ್ಲಿ ಶೇ.98.03 ಫಲಿತಾಂಶ ದಾಖಲಾಗಿದೆ.

ಡಿಸ್ಟಿಂಕ್ಷನ್‌ನಲ್ಲಿ 32, ಪ್ರಥಮ ಶ್ರೇಣಿಯಲ್ಲಿ 123 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಕಲಾ ವಿಭಾಗದಲ್ಲಿ ವಿದ್ಯಾ. ಬಿ 577 ಅಂಕ, ವಿಜ್ಞಾನ ವಿಭಾಗದಲ್ಲಿ ಪೃಥ್ವಿಸಾಗರ್. ಕೆ 569, ವಾಣಿಜ್ಯ ವಿಭಾಗದಲ್ಲಿ ಕರೀಷ್ಮ ಬಿ.ಜೆ 532, ವಾಣಿಜ್ಯ (ಗಣಕ ವಿಜ್ಞಾನ) ಚೇತನ್ ಕುಲಾಲ್ 569 ಅಂಕ ಪಡೆದಿದ್ದಾರೆ.

# ಅರಂತೋಡು : ಮತದಾನ ಜಾಗೃತಿಗಾಗಿ ಕಾಲ್ನಡಿಗೆ ಜಾಥಾ ಕಾರ್ಯಕ್ರಮ




2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಅಂಗವಾಗಿ ಮತದಾನ ಜಾಗೃತಿಗಾಗಿ ಕಾಲ್ನಡಿಗೆ ಜಾಥಾ ಕಾರ್ಯಕ್ರಮ ಇಂದು ನಡೆಯಿತು.

ಅರಂತೋಡು ಗ್ರಾಮ ಪಂಚಾಯತ್ ಮತ್ತು ನೆಹರು ಪದವಿ ಪೂರ್ವ ಕಾಲೇಜು ಅರಂತೋಡು, ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಇಲಾಖೆಗಳು ಮತ್ತು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಏ.12 ರಂದು ಲೋಕಸಭಾ ಚುನಾವಣೆಯ ಮತದಾನದ ಕುರಿತು ಜಾಗೃತಿ ಕಾಲ್ನಡಿಗೆ ಜಾಥಾವು ನಲ್ಲಿ ನಡೆಯಿತು. ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಾದ ಪರಮೇಸ್ವರ್ ಮತದಾನದ ಜಾಗೃತಿಯ ಕುರಿತು ಮಾತನಾಡಿ ಮತದಾನ ಜಾಗೃತಿಯ ಪ್ರಮಾಣವಚನ ಬೋಧಿಸಿದರು.

ಪಂಚಾಯತ್ ಉಪಾಧ್ಯಕ್ಷೆ ಭವಾನಿ ಚಿಟ್ಟನೂರು, ಚುನಾವಣಾ ಸೆಕ್ಟರ್ ಅಧಿಕಾರಿಗಳಾದ ಕಿಶೋರ್ ಕುಮಾರ್ ಕಿರ್ಲಾಯ, ಪಂಚಾಯತ್ ಸದಸ್ಯರಾದ ಶ್ರೀಮತಿ ಮಾಲಿನಿ ವಿನೋದ್ ಉಳುವಾರು, ಪುಷ್ಪರಾಜ್ ಕೊಡಂಕೇರಿ, ವೆಂಕಟರಮಣ ಪೆತ್ತಾಜೆ, ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಾದ ಪದ್ಮ ಕುಮಾರ್, ಭವ್ಯರಾಜ್, ಅರಂತೋಡು ಸಹಕಾರಿ ಸಂಘದ ನಿರ್ದೇಶಕ ಕುಸುಮಾಧರ ಅಡ್ಕಬಳೆ, ವಿಶ್ವ ಹಿಂದೂ ಪರಿಷತ್ ಸುಳ್ಯ ಪ್ರಖಂಡದ ಅಧ್ಯಕ್ಷರಾದ ಸೋಮಶೇಖರ ಪೈಕ, ತಾಲೂಕು ಪಂಚಾಯಿತಿ ಸಿಬ್ಬಂದಿಗಳು, ಪಂಚಾಯಿತಿನ ಸಿಬ್ಬಂದಿ ವರ್ಗ, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಇಲಾಖೆಯ ಕಾರ್ಯಕರ್ತರು, ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಊರ ನಾಗರಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅರಂತೋಡು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ್ ಎಮ್ ಆರ್ ಸ್ವಾಗತಿಸಿ, ಗ್ರಾಮ ಪಂಚಾಯಿತ್ ಅಧ್ಯಕ್ಷರಾದ ಕೇಶವ ಅಡ್ತಲೆ ವಂದಿಸಿದರು.

